||ಓಂ ಶ್ರೀಗುರುಭ್ಯೋ ನಮಃ ||

ಕೀರ್ತಿಶೇಷ ಖಂಡೇರಿ ಶ್ರೀಅನಂತಶಾಸ್ತ್ರಿವಿರಚಿತ

ಶ್ರೀ ಅಗಲ್ಪಾಡಿಮಾಹಾತ್ಮ್ಯಮ್

ಸಾಽಗಲ್ಪಾಡಿಧುರಂಧರಾ ವಿಜಯತೇ ದೇವ್ಯನ್ನಪೂರ್ಣೇಶ್ವರೀ

ಅನುವಾದಕರು: ವಿದ್ವಾನ್ ಶ್ರೀ ಕೃಷ್ಣರಾಜ ಭಟ್ಟ, ಬೇಂಗ್ರೋಡಿ



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳು
ಶೃಂಗೇರಿ

ಶೃಂಗೇರಿ ಶ್ರೀ ಶಾರದಾಂಬೆ

ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀಮಹಾಸ್ವಾಮಿಗಳು
ಶೃಂಗೇರಿ

ಮುನ್ನುಡಿ

ಮಾನುಷಲೋಕದಲ್ಲಿ ಮಿಗಿಲಾದುದನ್ನು ಕಂಡಾಗ ಮನವು ಮಣಿಯುತ್ತದೆ. ಅಂತಹ ಕಡೆಗಳಲ್ಲಿ ಭಗವದ್ವಿಭೂತಿಯ ಸನ್ನಿಧಾನವೇ ಇರುತ್ತದೆ ಎಂಬುದು ನಮ್ಮ ಸನಾತನ ಸಂಸ್ಕೃತಿಯ ವಿಶ್ವಾಸ. ಮಿಗಿಲಿಗೂ ಮಿಗಿಲೆನಿಸಿ ಎಲ್ಲವನ್ನು ವ್ಯಾಪಿಸಿರುವ ಪರಾತ್ಪರತತ್ತ್ವದ ಮುಂದೆ ಸಂಸಾರದ ನಶ್ವರ ಸುಖಗಳಲ್ಲಿ ಹುಚ್ಚೆದ್ದು ಕುಣಿದು ದಣಿದಿದ್ದ ಮನವೂ ಮಣಿಯುತ್ತದೆ, ತಣಿಯುತ್ತದೆ. ಅದನ್ನೇ ಉಪನಿಷತ್ತು "ಯೋ ವೈ ಭೂಮಾ ತತ್ಸುಖಮ್, ನಾಲ್ಪೇ ಸುಖಮಸ್ತಿ" ಎಂದು ಹಿತೋಪದೇಶ ಮಾಡಿರುವುದು. ಇಂತಹ ತತ್ತ್ವವನ್ನು ನೆಚ್ಚಿಕೊಂಡಾಗ ಮಾತ್ರ ಬಾಳು ಬಂಗಾರವಾಗಲು ಸಾಧ್ಯ. ಪರತತ್ತ್ವವನ್ನು ಕಂಡು ಬೆರಗಾಗಿ ಮಾತುಗಳಲ್ಲಿ ಕೊಂಡಾಡಲು ತೊಡಗಿ ಸೋತವರೆಷ್ಟೋ ಮಂದಿ. ಮಾತಿನ ಸೋಲೇ ಅದಕ್ಕೆ ಅಲಂಕಾರ. ಕಾವ್ಯವೂ ಕೂಡ ಒಂದು ವಚನವಿಶೇಷವೇ ತಾನೇ? ಪರತತ್ತ್ವದೆದುರು ಸೋತು ಸಹೃದಯರ ಮನವನ್ನು ಗೆದ್ದ ಅಂತಹ ಒಂದು ಲಘುಕಾವ್ಯವೇ "ಶ್ರೀಮದಗಲ್ಪಾಡಿಮಾಹಾತ್ಮ್ಯಮ್". ಶ್ರೀ ಖಂಡೇರಿ ಅನಂತಶಾಸ್ತ್ರಿಗಳೆಂಬ ವಿದ್ವಾಂಸರ ಈ ರಚನೆಯು ಜಗನ್ಮಾತೆಯಾದ ದೇವಿಯ ಸ್ತೋತ್ರ ಮಾತ್ರವಲ್ಲದೆ, ಅನ್ನಪೂರ್ಣೇಶ್ವರಿಯಾಗಿ ದೇವಿಯು ಅಗಲ್ಪಾಡಿ ಕ್ಷೇತ್ರದಲ್ಲಿ ನೆಲೆಯಾದ ಹಿನ್ನಲೆಯ ಇತಿವೃತ್ತವೂ ಸೇರಿಕೊಂಡು ಲಘುಕಾವ್ಯವೇ ಆಗಿ ಪರಿಣಮಿಸಿದೆ.

ಶ್ರೀಮದಗಲ್ಪಾಡಿಮಾಹಾತ್ಮ್ಯವೆಂಬ ಈ ಕಾವ್ಯದಲ್ಲಿ ಒಟ್ಟು ೧೧೬ ಪದ್ಯಗಳಿಂದ ಕೂಡಿದ ಐದು ಸ್ತಬಕಗಳು ಮುಗಿದ ಮೇಲೆ ಇರುವ ಏಳು ಪದ್ಯಗಳಲ್ಲಿ ಶಾಸ್ತ್ರಿಗಳು ತಮ್ಮ ಪೂರ್ವಜರ ವೃತ್ತಾಂತವನ್ನು

ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಸಮಗ್ರರಚನೆಯಲ್ಲಿ ಶಾಸ್ತ್ರಿಗಳಿಗೆ ಬೇರೆ ಬೇರೆ ಶಾಸ್ತ್ರಗಳಲ್ಲಿ ಇದ್ದಂತಹ ಪ್ರೌಢಿಮೆಯನ್ನು ಹಾಗೂ "ಶ್ರದ್ಧಾ ಅದೃಷ್ಟಾರ್ಥೇಷು ಕರ್ಮಸು ಆಸ್ತಿಕ್ಯಬುದ್ಧಿಃ ದೇವತಾದಿಷು ಚ" ಎಂದು ಬೃಹದಾರಣ್ಯಕಭಾಷ್ಯದಲ್ಲಿ ಶ್ರೀಶಂಕರಭಗವತ್ಪಾದರು ವಿವರಿಸಿದಂತೆ ಶಾಸ್ತ್ರಿಗಳಿಗೆ ಅಮ್ಮನವರ ಮೇಲೆ ಇದ್ದ ಶ್ರದ್ಧಾತಿಶಯವನ್ನು ಮನಗಾಣಬಹುದು.

ಈ ಕಾವ್ಯದಲ್ಲಿ ಊರಿನ ಹೆಸರುಗಳನ್ನು ಸೊಗಸಾಗಿ ಸಂಸ್ಕೃತಕ್ಕೆ ಅನುವಾದಿಸಿರುವುದನ್ನು ಅವಲೋಕಿಸಬಹುದು. ಉದಾಹರಣೆಗೆ ಹುಬ್ಬಳ್ಳಿಗೆ "ಭ್ರೂವಲ್ಲಿಕಾ" ಎಂದೂ, ಉಪ್ಪಂಗಳಕ್ಕೆ "ಲಾವಣಾಜಿರ" ಎಂದೂ ಶಬ್ದವನ್ನು ಸೃಷ್ಟಿಸಿದ್ದಾರೆ. ಅದಲ್ಲದೇ ವಿಲಾಪಯನ್, ವಿದುದ್ರುವುಃ, ಖರ್ವಟಾದಿಷು, ವಿಷ್ವದ್ರ್ಯಙ್, ಸ್ವರಿತಾಃ, ಸಮಿಂಧಾನಃ, ಸಂವಿದಾನ್ಯೈಃ, ಭುಗ್ನಸ್ಯ ಇವೇ ಮೊದಲಾದ ಪಾಂಡಿತೀಪ್ರಕರ್ಷಕ್ಕೆ ಮಾನದಂಡವಾಗಿರುವ ಪದಗಳು ಹೇರಳವಾಗಿವೆ. ಲೌಲಾಯಮ್, ಮಾರ್ತ್ಯಮ್, ಐಭಮ್ ಹೀಗೆ ವ್ಯಾಕರಣಬಲದಿಂದ ಛಂದಸ್ಸಿಗೆ ಒಗ್ಗುವಂತಹ ಹತ್ತು ಹಲವು ಬಗೆಯ ತದ್ಧಿತಶಬ್ದರೂಪಗಳನ್ನು ಹೊಸೆಯುವ ಆಸಕ್ತಿಯೂ ಇಲ್ಲಿ ಉಲ್ಲೇಖನೀಯ. ವೈದಿಕವಾಙ್ಮಯದಲ್ಲಿ ಹೆಚ್ಚು ಬಳಕೆಯಲ್ಲಿರುವ "ಷಚ" ಮೊದಲಾದ ಧಾತುಗಳನ್ನು ಬಳಸಿರುವುದೂ ಕಾಣುತ್ತದೆ.

"ಅನ್ನಾನಾಂ ಪಾಯಸಾನಾಮ್..." ಎಂಬ ಪದ್ಯದಲ್ಲಿ ಶಾಸ್ತ್ರಿಗಳಿಗಿರುವ "ರುಚಿಶುದ್ಧಿ"ಯನ್ನು ತಿಳಿಯಬಹುದು. ಸ್ಥಳೀಯವಾದ ಕೆಲವು ಆಹಾರವಿಶೇಷಗಳ ಉಲ್ಲೇಖ ಈ ಪದ್ಯದಲ್ಲಿ ಬರುತ್ತದೆ. ಐದನೆಯ ಸ್ತಬಕದಲ್ಲಿ ದೇವಿಗೆ ಬ್ರಹ್ಮಕುಂಭಾಭಿಷೇಕವು ನೆರವೇರಿದ ಕ್ರಮವನ್ನು ಆಗಮಶಾಸ್ತ್ರನಿಯಮಪುರಸ್ಸರವಾಗಿ

ನಿರೂಪಿಸಿದ್ದಾರೆ. ಇನ್ನು "ಬ್ರೂತೇ ವಾಗ್ಭೃದಗೋಚರಾಂ ಕಥಮಿಮಂ ಬ್ರೂಮೋ ವಯಂ ತ್ವದ್ಗುಣಾನ್" ಎಂಬಲ್ಲಿ "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ..." ಎಂಬ ತೈತ್ತಿರೀಯೋಪನಿಷತ್ತಿನ ವಚನದ ಸಾರವನ್ನು ಕಾವ್ಯರೂಪದಲ್ಲಿ ಹಿಡಿದಿಟ್ಟಿದ್ದಾರೆ.

ಶಾಸ್ತ್ರಿಗಳು ಈ ಕಾವ್ಯದಲ್ಲಿ ಹಲವಾರು ಛಂದಸ್ಸಿನ ಬಗೆಬಗೆಯ ವೃತ್ತಗಳನ್ನು ಬಳಸಿಕೊಂಡಿದ್ದಾರೆ. ಸ್ರಗ್ಧರಾ, ಶಾಲಿನಿ, ವಂಶಸ್ಥ, ಇಂದ್ರವಂಶಾ, ಶಿಖರಿಣಿ, ದ್ರುತವಿಲಂಬಿತ, ಮಾಲಿನಿ, ಶಾರ್ದೂಲವಿಕ್ರೀಡಿತ, ವಸಂತತಿಲಕ, ಶ್ಲೋಕ ಎಂದೇ ಹೆಸರಾಗಿರುವ ಅನುಷ್ಟುಪ್ ಛಂದಸ್ಸಿನ ಭೇದವೂ ಸೇರಿದಂತೆ ಹತ್ತು ಬಗೆಯ ವೃತ್ತಗಳನ್ನು ಇಲ್ಲಿ ಕಾಣಬಹುದು. ಇವುಗಳಲ್ಲಿ ಸ್ರಗ್ಧರಾ, ವಂಶಸ್ಥ, ದ್ರುತವಿಲಂಬಿತ ಮತ್ತು ಶಾರ್ದೂಲವಿಕ್ರೀಡಿತ ವೃತ್ತಗಳಲ್ಲಿ ವಿಪುಲವಾಗಿ ಪದ್ಯಗಳನ್ನು ರಚಿಸಿದ್ದಾರೆ. ಆಯಾ ಛಂದಸ್ಸಿಗೆ ಹೊಂದುವ ಪದಪದ್ಧತಿಯ ಸಿದ್ಧಿಯನ್ನು ಇಲ್ಲಿ ಗಮನಿಸಬಹುದು. "ಸಂಸಾರಾಸಾರಕಾಸಾರಜಕಲುಷಪೃಷತ್ಕಚ್ಚರಾ ಸಚ್ಚರಿತ್ರಾ.." "ಉಗ್ರಾಸ್ಯಂ ಚೋಗ್ರವೀರ್ಯಂ ತದನು ರಣರಸಾಯಾಂ ಚ ತಾಮ್ರಂ ತಥಾಂಧಂ.." ಹೀಗೆ ಒಂದೊಂದು ಕಡೆ ಯತಿಭಂಗವಾಗಿರುವುದೂ ಕಾಣುತ್ತದೆ.

ಶಾಸ್ತ್ರಿಗಳಿಗೆ ಜ್ಯೋತಿಶ್ಶಾಸ್ತ್ರದಲ್ಲೂ ಪರಿಣತಿಯಿರುವುದು ಕೆಲವು ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಒಂದೆಡೆ ರೋಹಿಣೀನಕ್ಷತ್ರದಲ್ಲಿ ಎಂಬ ಅರ್ಥದಲ್ಲಿ "ವಿಧಿಭೇ" ಎಂದು ಬಳಸಿದ್ದಾರೆ. ಜ್ಯೌತಿಷದ ಪ್ರಕಾರ ರೋಹಿಣೀನಕ್ಷತ್ರದ ದೇವತೆ ಬ್ರಹ್ಮ. ಇದಕ್ಕೆ "ಅಗ್ನಿಃ ಪ್ರಜಾಪತಿಃ ಸೋಮೋ ರುದ್ರೋಽದಿತಿರ್ಬೃಹಸ್ಪತಿಃ" ಎಂಬ ಲಗಧಾಚಾರ್ಯರ ವೇದಾಂಗಜ್ಯೌತಿಷದ ವಚನ ಪ್ರಮಾಣ. ಕವಿಗಳಿಗೆ

ಹೇಳಬೇಕಾದ ವಿಚಾರವನ್ನು ಒಂದು ಛಂದಸ್ಸಿನ ಎರಕಕ್ಕೆ ಸರಿಯಾಗುವಂತೆ ನಿರೂಪಿಸಲು ಹೇಗೆ ಇತರ ಶಾಸ್ತ್ರಗಳ ಜ್ಞಾನವು ಪೂರಕವಾಗುತ್ತದೆ ಎಂಬುದಕ್ಕೆ ಇದೇ ನಿದರ್ಶನ.

ಈ ಕಾವ್ಯದಲ್ಲಿ ಬರುವಂತಹ ಕೆಲವೊಂದು ಪದ್ಯಗಳಲ್ಲಿ ಪ್ರಾಚೀನರ ಕೃತಿಗಳಲ್ಲಿ ಕಂಡುಬರುವ ಪದ್ಯಗಳ ಛಾಯೆಯು ಇಣುಕುತ್ತದೆ. ಅದನ್ನು ಅಲಂಕಾರಶಾಸ್ತ್ರಮರ್ಮಜ್ಞನಾದ ಆನಂದವರ್ಧನನು "ಸಂವಾದ" ಎನ್ನುತ್ತಾನೆ. "ನಿತ್ಯಾನಂದಪರಾಯಣಾ..." ಎಂಬ ಪದ್ಯವನ್ನು ಓದಿದಾಗ ಶ್ರೀಶಂಕರಭಗವತ್ಪಾದರ ಅನ್ನಪೂರ್ಣಾಸ್ತೋತ್ರದ "ನಿತ್ಯಾನಂದಕರೀ..." ಪದ್ಯವು ನೆನಪಾಗುತ್ತದೆ. "ತ್ವತ್ಪಾದನಖೇಂದುಕಾಂತ್ಯರುಣಿಮಾಂಭೋಧೌ..." ಎಂಬ ಪದ್ಯವು ಸೌಂದರ್ಯಲಹರಿಯ "ಶಿವಃ ಶಕ್ತ್ಯಾ ಯುಕ್ತೋ..., "ತನೀಯಾಂಸಂ ಪಾಂಸುಂ..." ಎಂಬ ಪದ್ಯಗಳನ್ನು ನೆನಪಿಸುತ್ತದೆ. "ಕಲ್ಯಾಣಾನಾಂ ನಿಧಾನಂ..." ಎಂಬ ಪದ್ಯವು ಅದೇ ರೀತಿ ಆರಂಭವಾಗುವ ಹನುಮನ್ನಾಟಕದ ಮಂಗಳಪದ್ಯವನ್ನು ನೆನಪಿಸುತ್ತದೆ. "ವಿಷ್ಣೋಸ್ತ್ವಂ ದೇವಿ.." ಎಂಬ ಪದ್ಯದಲ್ಲಿ ಬರುವ "ತ್ವಾಮಾಹುಃ ಸರ್ವಬೀಜಪ್ರಕೃತಿರಿತಿ" ಎಂಬ ಭಾಗವು ಅಭಿಜ್ಞಾನಶಾಕುಂತಲದ ಮಂಗಲಶ್ಲೋಕವನ್ನು ನೆನಪಿಗೆ ತರುತ್ತದೆ. ಆದರೆ ಇದಾವುದೂ ಕವಿಯ ಶಕ್ತಿಯನ್ನು ಶಂಕಿಸುವಂತೆ ಗಾಢವಾದಂತಹ ಸಂವಾದವಾಗಿಲ್ಲ ಎನ್ನುವುದು ಮನನೀಯ.

"ಕಾವ್ಯದ ಶೋಭೆಗೆ ಕಾರಣವಾದ ಧರ್ಮವೇ ಅಲಂಕಾರ" ಎನ್ನುವುದು ದಂಡಿಯ ಅಭಿಮತ. ಉಪಮಾ, ರೂಪಕಗಳಂತಹ ಅರ್ಥಾಲಂಕಾರಗಳು; ಅನುಪ್ರಾಸ, ಯಮಕಗಳಂತಹ ಶಬ್ದಾಲಂಕಾರಗಳು ಈ ಕಾವ್ಯದ ಶೋಭೆಯನ್ನು ಹೆಚ್ಚಿಸಿವೆ. ಅದರಲ್ಲಿಯೂ ಅರ್ಥಾಂತರನ್ಯಾಸಾಲಂಕಾರದ ವಿನ್ಯಾಸದಲ್ಲಿ ಕವಿಗೆ

ಸಿದ್ಧಿಯಿದೆ ಎನ್ನುವುದು ನಿಶ್ಚಿತ. ವಿಘಟನೇ ಘಟನೇ ಚ ವಿಧಿಃ ಕ್ಷಮಃ, ನಿರಂಕುಶಾಃ ಸಂದಧತೇ ಕಿಲಾಪದಮ್, ಯಾವಚ್ಛಕ್ಯಂ ಯತಂತೇ ಭುವಿ ವಿಪುಲಧಿಯೋ ದೈವಮತ್ರಾತಿರಿಕ್ತಮ್, ನಿತ್ಯೇ ದುರ್ಲಭವಸ್ತುನಿ ಪ್ರಿಯತಮೇ ಹಸ್ತಾಂತರಾಲಸ್ಥಿತೇ ಸೌಲಭ್ಯೇನ ಯದನ್ಯವಸ್ತು ವಿಜಯಃ ಸಾ ಮೂಢತೈವ ಸ್ಫುಟಮ್, ಕ ಆಯಾಸೋ ಲೋಕೋದ್ಧರಣಕೃತಯೇ ಪ್ರಾಪ್ತಜನುಷಾಮ್ – ಇವೇ ಮೊದಲಾದ ಸೂಕ್ತಿಸಂದೋಹವೇ ಇದಕ್ಕೆ ಸಾಕ್ಷಿ. "ಗುಣಗಣೇಷು ಮಹತ್ಸು ಮಹಾತ್ಮನಾಂ ವಿಕೃತಿಮಿಚ್ಛತಿ ಚಿತ್ತಮತದ್ವಿದಾಮ್ । ವಿಕಸತಿ ಸ್ಫುಟಮುತ್ಪಲಮುದ್ಗತೇ ಶಶಿನಿ ಮೀಲತಿ ಪಂಕಜಮಂಜಸಾ ॥" ಎಂಬ ಪದ್ಯದಲ್ಲಿರುವ ದೃಷ್ಟಾಂತಾಲಂಕಾರವೂ ಮನೋಹರ.

ಪ್ರತಿಪಾದ್ಯವಾದ ವಿಷಯಕ್ಕೆ ಅನುಗುಣವಾಗಿ ಶ್ಲೋಕದಲ್ಲಿ ಪದಶಯ್ಯೆಯು ಬದಲಾಗುವುದು ಇಲ್ಲಿ ಕಂಡು ಬರುವ ಇನ್ನೊಂದು ವಿಶೇಷ. ಯುದ್ಧವನ್ನು ವರ್ಣಿಸುವಾಗ ಗೌಡೀರೀತಿಯ ಉಜ್ಜ್ವಲವಾದ ಪದಪದ್ಧತಿ ಮಿಂಚುತ್ತದೆ. ಅನ್ವಯಕ್ಲೇಶಗಳಿಲ್ಲದ ಪ್ರಸಾದಗುಣ ಈ ಕಾವ್ಯಕ್ಕೆ ಭೂಷಣವೆನಿಸಿದೆ. ಭಾಷಾಪ್ರೌಢಿಮೆ ಕಾವ್ಯದಲ್ಲಿ ಎದ್ದು ಕಾಣುತ್ತಿದ್ದರೂ ನಾಲ್ಕಾರು ಕಡೆಗಳಲ್ಲಿ ಅಪಾಣಿನೀಯ ಶಬ್ದಗಳೂ ತೋರಿಬರುತ್ತವೆ. ಇದರ ಕುರಿತು ಚಿಂತಿಸಿದಾಗ, ಶಾಸ್ತ್ರಿಗಳು ಬರೆದ ಮೇಲೆ ತ್ರುಟಿತವಾದ ಭಾಗವನ್ನು ಯಾರಾದರೂ ಬರೆದು ಸೇರಿಸಿ ಇಂತಹ ಶಬ್ದಗಳು ನುಸುಳಿರಬಹುದೇ ಎಂಬ ಸಂಶಯವೂ ಮನದ ಮೂಲೆಯಲ್ಲಿ ಸುಳಿಯುತ್ತದೆ.

ಒಟ್ಟಾರೆ ಈ "ಶ್ರೀಮದಗಲ್ಪಾಡಿಮಾಹಾತ್ಮ್ಯಮ್" ಸಂಸ್ಕೃತದ ಹಿಂದಿನ ಕಾವ್ಯಗಳ ಶೈಲಿಯಲ್ಲಿ ಮೆಯ್ದಾಳಿರುವ ಭಕ್ತಿಭೂಮಿಕೆಯ ಭಾವಬಂಧುರವಾದ ಕಾವ್ಯಭವನ. ಅದರೊಳಗೆ ಆ ತಾಯಿಯ ದಿವ್ಯ ಸಾನ್ನಿಧ್ಯ ಪ್ರತಿಷ್ಠಿತವಾಗಿದೆ. ಇದಕ್ಕೆ ಕಾರಣವಾದ ವಿದ್ವನ್ಮಣಿ ಖಂಡೇರಿ ಅನಂತಶಾಸ್ತ್ರಿಗಳಿಗೆ ಅನಂತ ನಮನಗಳು. ಇದನ್ನು ಕನ್ನಡದ ಅನುವಾದದ ಜೊತೆಗೆ ಹೊರತರುತ್ತಿರುವುದು ಇನ್ನೂ ಸಂತೋಷದ ವಿಷಯ. ಇಂತಹ ಸಂತೋಷ ಮತ್ತೆ ಮತ್ತೆ ಮೂಡುವಂತಾಗಲಿ ಎಂದು ಆಶಿಸುತ್ತಾ, ವಾಗಧೀಶ್ವರಿಯನ್ನು ವಂದಿಸುತ್ತೇನೆ.

"ಸರಸ್ವತ್ಯಾಸ್ತತ್ತ್ವಂ ಕವಿಸಹೃದಯಾಖ್ಯಂ ವಿಜಯತೇ"

ಆಶ್ವಯುಜ–ಶುಕ್ಲ–ಪ್ರತಿಪತ್
ವಿಶ್ವಾವಸು ಸಂವತ್ಸರ

ಡಾ. ಮಹೇಶ ಭಟ್ಟ ಆರ್. ಹಾರ್ಯಾಡಿ
ಅಷ್ಟಾವಧಾನಿಗಳು ಮತ್ತು ಸಹಾಯಕ ಪ್ರಾಧ್ಯಾಪಕರು
ಅಲಂಕಾರಶಾಸ್ತ್ರ ವಿಭಾಗ
ಎಸ್.ಎಮ್.ಎಸ್.ಪಿ ಸಂಸ್ಕೃತ ಮಹಾವಿದ್ಯಾಲಯ, ಉಡುಪಿ

ಅನುವಾದಕನುಡಿ

ಭಗವಂತನ ಸೃಷ್ಟಿಯಲ್ಲಿ ಮಾನವನು ಶ್ರೇಷ್ಠನೆನಿಸಿಕೊಳ್ಳಲು ಧರ್ಮವೇ ಕಾರಣವೆಂದೂ, ಅಧಾರ್ಮಿಕನಾದವನು ಪಶುವಿಗೆ ಸಮಾನನೆಂದೂ "ಧರ್ಮೇಣ ಹೀನಾ: ಪಶುಭಿ: ಸಮಾನಾಃ" ಎಂಬ ಪ್ರಸಿದ್ಧವಾದ ಉಕ್ತಿಯಿಂದ ತಿಳಿದು ಬರುತ್ತದೆ. ಅಂತಹ ಧರ್ಮದ ಆಚರಣೆ ಮತ್ತು ಪರಿಪಾಲನೆಯಲ್ಲಿ ದೇವಾಲಯಗಳು ಅತ್ಯಂತ ಪ್ರಮುಖವಾದ ಪಾತ್ರವನ್ನು ಹೊಂದಿವೆ ಎಂದರೆ ತಪ್ಪಾಗಲಾರದು. ಅಂತಹಾ ಧಾರ್ಮಿಕ ಕೇಂದ್ರವಾದ ದೇವಾಲಯಗಳ ಮಹಾತ್ಮೆಯ ಕುರಿತಾಗಿ ಆಯಾಯ ದೇವಾಲಯಕ್ಕೆ ಸಂಬಂಧಿಸಿದ ಭಕ್ತವರ್ಗದವರು ತಿಳಿದುಕೊಂಡಾಗ ಮಾತ್ರ ಅಂತಹಾ ದೇವಾಲಯಗಳು ವಿಶೇಷವಾಗಿ ಅಭಿವೃದ್ಧಿಯನ್ನು ಕಾಣಲು ಸಾಧ್ಯ. ಆದ್ದರಿಂದ ತಮ್ಮ ತಮ್ಮ ಕುಲಕ್ಕೆ ಸಂಬಂಧಪಟ್ಟ ದೇವಾಲಯದ ಇತಿಹಾಸ ಮತ್ತು ಅಲ್ಲಿನ ಸಂಪ್ರದಾಯ ಮೊದಲಾದವುಗಳನ್ನು ತಿಳಿಯುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೆನ್ನಬಹುದು.

ಈ ರೀತಿಯಾದ ಅನೇಕ ಪ್ರಸಿದ್ಧ ದೇವಾಲಯಗಳು ದೇವಭೂಮಿಯಾದ ನಮ್ಮ ಭರತಖಂಡದಲ್ಲಿ ನಿರಂತರವಾಗಿ ಜನರಲ್ಲಿ ಧರ್ಮಜಾಗೃತಿಯನ್ನು ಮೂಡಿಸುತ್ತಿವೆ. ಇಂತಹಾ ದೇವಾಲಯಗಳಲ್ಲಿ ಕಾಸರಗೋಡು ಜಿಲ್ಲೆಯ ಉಪ್ಪಂಗಳ ಪರಿಸರದಲ್ಲಿರುವ ಕರ್ಹಾಡ ಬ್ರಾಹ್ಮಣರಿಗೆ ಸಂಬಂಧಿಸಿದ ಅಗಲ್ಪಾಡಿ

ಶ್ರೀದುರ್ಗಾಪರಮೇಶ್ವರಿ ದೇವಾಲಯವು ಕೂಡಾ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ದೇವಾಲಯವಾಗಿದೆ.

ಈ ದೇವಾಲಯದ ಇತಿಹಾಸವನ್ನು ತಿಳಿಸುವಂತಹ ಖಂಡೇರಿ ಅನಂತಶಾಸ್ತ್ರೀ ಎಂಬ ಕವಿಗಳು ರಚಿಸಿರುವ ಶ್ರೀ ಅಗಲ್ಪಾಡಿಮಹಾತ್ಮ್ಯಮ್ ಎಂಬ ಲಘುಕಾವ್ಯವೊಂದಿರುವುದು ಕರ್ಹಾಡ ಬ್ರಾಹ್ಮಣರ ಸೌಭಾಗ್ಯವೇ ಸರಿ. ಈ ಕಾವ್ಯದಲ್ಲಿ ಕರ್ಹಾಡ ಬ್ರಾಹ್ಮಣರು ಉಪ್ಪಂಗಳಕ್ಕೆ ತಲುಪಿರುವ ರೀತಿ ಅವರಿಗೆ ದುರ್ಗಾಪರಮೇಶ್ವರಿಯ ವಿಗ್ರಹ ಹೇಗೆ ದೊರಕಿತು, ಆ ಸ್ಥಳವು ಯಾವ ಕಾರಣಕ್ಕೆ ಅಗಲ್ಪಾಡಿ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು, ಕುಂಬಳೆಯ ರಾಜನು ಅಗಲ್ಪಾಡಿ ದೇವಿಯನ್ನು ತೆಗೆದುಕೊಂಡು ಹೋಗಿ ಮಾಯಿಪಾಡಿಯಲ್ಲಿ ಪ್ರತಿಷ್ಠಾಪಿಸಿರುವುದು, ಐವರು ಮುಕ್ತೇಶ್ವರರ ನೇತೃತ್ವದಲ್ಲಿ ಅಗಲ್ಪಾಡಿಯಲ್ಲಿ ವಿನೂತನವಾದ ದೇವಾಲಯದ ನಿರ್ಮಾಣ, ಮಾಘ ಮಾಸದಲ್ಲಿ ನಡೆಯುವ ದೇವಿಯ ಉತ್ಸವ ಆಚರಣೆ ಮೊದಲಾದ ಅನೇಕ ಐತಿಹಾಸಿಕ ವಿಚಾರಗಳು ಮನೋಹರವಾಗಿ ವರ್ಣಿಸಲ್ಪಟ್ಟಿವೆ. ಆದರೆ ಈ ಕಾವ್ಯವು ಸಂಸ್ಕೃತ ಭಾಷೆಯಲ್ಲಿರುವುದರಿಂದ, ಸಂಸ್ಕೃತವನ್ನು ಅರ್ಥೈಸಿಕೊಳ್ಳಲಾಗದವರಿಗೂ ಅನುಕೂಲವಾಗುವಂತೆ ಇದರ ತಾತ್ಪರ್ಯವನ್ನು ಕನ್ನಡ ಭಾಷೆಗೆ ಅನುವಾದ ಮಾಡಬೇಕೆಂಬ ಬಳ್ಳಪ್ಪದವು ಮಾಧವ ಉಪಾಧ್ಯಾಯರ ಅಭಿಲಾಷೆಯನ್ನು ನನಗೆ ಸೂಚಿಸಿ, ಮೂಲಪ್ರತಿಯನ್ನೂ ನೀಡಿ ದಿವಂಗತ ಕೊಟ್ಟಂಗುಳಿ ವೆಂಕಟಕೃಷ್ಣ ಭಟ್ ಅವರು ಭಾಷಾಂತರದ ಕಾರ್ಯವನ್ನು ನನಗೆ ವಹಿಸಿದರು. ಈ

ರೀತಿಯಾಗಿ ಆರಂಭವಾದ ಅನುವಾದಕಾರ್ಯವು ಕಾವ್ಯದ ಪ್ರೌಢತೆಯಿಂದಲೂ, ಅಪ್ರಸಿದ್ಧ ಶಬ್ದಗಳ ಕಾರಣದಿಂದಾಗಿಯೂ ಒಂದು ಹಂತದವರೆಗೆ ಮಾತ್ರವೇ ಪೂರ್ಣವಾಯಿತು. ಹೀಗಿರಬೇಕಾದರೆ ಈ ವಿಚಾರವನ್ನು ತಿಳಿದಂತಹ ಉಪ್ಪಂಗಳ ನಾಗರಾಜರು ಸ್ವಯಂಪ್ರೇರಿತರಾಗಿ ಪುಸ್ತಕದ ಮುದ್ರಣದ ಹೊಣೆಯನ್ನು ವಹಿಸಿ, ನನ್ನ ಪಿತೃವ್ಯಪುತ್ರನಾದ ಡಾ.ರಾಧಾಕೃಷ್ಣನ ಸಹಾಯದೊಂದಿಗೆ ಉಳಿದಿರುವ ಕೆಲವು ಶ್ಲೋಕಗಳ ಅನುವಾದವನ್ನು ಪೂರ್ಣಗೊಳಿಸಿದರು. ಈ ರೀತಿಯಾಗಿ ಪೂರ್ಣಗೊಂಡಂತಹ ಈ ಭಾವಾನುವಾದದಲ್ಲಿ ಯಾವುದಾದರೂ ಲೋಪದೋಷಗಳಿದ್ದಲ್ಲಿ ವಿದ್ವಜ್ಜನರು ಸೂಚಿಸಬೇಕೆಂದೂ, ಮುಂದಿನ ಮುದ್ರಣ ವೇಳೆಯಲ್ಲಿ ಅದನ್ನು ಸರಿಪಡಿಸುವ ಪ್ರಯತ್ನವನ್ನು ಮಾಡುವುದಾಗಿಯೂ ವಿನಯಪೂರ್ವಕವಾಗಿ ವಿಜ್ಞಾಪಿಸುತ್ತಾ ಪ್ರಥಮ ಮುದ್ರಣಕ್ಕೆ ಅಡಿಯಿಡುತ್ತಿದ್ದೇವೆ.

ಈ ಪುಸ್ತಕವು ಬಿಡುಗಡೆಯಾಗುವ ಹಂತಕ್ಕೆ ಬರಲು **ದಕ್ಷಿಣಾಮ್ನಾಯಶೃಂಗೇರಿ ಶ್ರೀಶಾರದಾಪೀಠಾಧೀಶ್ವರರಾದ ಪರಮಪೂಜ್ಯಜಗದ್ಗುರು ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳವರ ಪೂರ್ಣಾನುಗ್ರಹವೇ ಕಾರಣವಾಗಿದ್ದು, ಪರಮಪೂಜ್ಯ ಶ್ರೀ ಶ್ರೀ ಜಗದ್ಗುರುಗಳವರ ಚರಣಕಮಲಗಳಿಗೆ ಭಕ್ತಿಪೂರ್ವಕಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ. ಹಾಗೆಯೇ ಪುಸ್ತಕಪ್ರಕಾಶನದ ವಿಚಾರವನ್ನು ವಿಜ್ಞಾಪಿಸಿ ಶ್ರೀಮುಖವನ್ನು ಪ್ರಾರ್ಥಿಸಿದಾಗ ಸಂತೋಷದಿಂದ ಪೂರ್ಣಾನುಗ್ರಹವನ್ನು ಮಾಡಿರುವ ಪರಮಪೂಜ್ಯಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀಮಹಾಸ್ವಾಮಿಗಳವರ** ಚರಣಾರವಿಂದಗಳಿಗೆ ಕೃತಜ್ಞತಾಪೂರ್ವಕಪ್ರಣಾಮಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಕಾರ್ಯಕ್ಕೆ ಸಕಲ ಸಲಹೆ-ಸೂಚನೆಗಳನ್ನು ನೀಡಿ ಹರಸಿದ, ಗುರುಸ್ಥಾನದಲ್ಲಿರುವ ಬಳ್ಳಪ್ಪದವು ಮಾಧವ ಉಪಾಧ್ಯಾಯರಿಗೆ ಗೌರವಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪುಸ್ತಕಕ್ಕೆ ಮುನ್ನುಡಿಯನ್ನು ನೀಡಿ ಶುಭಹಾರೈಸಿದ ಅವಧಾನಿಗಳು ಡಾ। ಮಹೇಶ್ ಭಟ್ ಆರ್. ಹಾರ್ಯಾಡಿ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಅನುವಾದದಲ್ಲಿ ಸಹಕರಿಸಿದ ನನ್ನ ತಮ್ಮನಾದ ಡಾ। ರಾಧಾಕೃಷ್ಣ ಹಾಗೂ ಮುದ್ರಣ ಪರಿಶೋಧನೆಯನ್ನು ಮಾಡಿರುವ ಬಟ್ಯಮೂಲೆ ಶ್ರೀಕೃಷ್ಣ ಭಟ್ ಮತ್ತು ಮುದ್ರಣ ಕಾರ್ಯದ ನಿರ್ವಾಹಕರಾದ ಉಪ್ಪಂಗಳ ನಾಗರಾಜರಿಗೂ ಧನ್ಯವಾದಗಳನ್ನು ತಿಳಿಸುತ್ತಾ ಈ ಪುಸ್ತಕದ ಮುಖೇನ ಅಗಲ್ಪಾಡಿ ದೇವಾಲಯದ ಇತಿಹಾಸವು ಸಮಸ್ತ ಭಕ್ತರ ಮನೆ-ಮನವನ್ನು ತಲುಪಲಿ ಎಂದು ಶ್ರೀ ದುರ್ಗಾ ಪರಮೇಶ್ವರಿಯನ್ನು ಪ್ರಾರ್ಥಿಸಿ ವಿರಮಿಸುತ್ತೇನೆ.

ವಿಶ್ವಾವಸು ಸಂವತ್ಸರ
ಆಶ್ವಯುಜಶುಕ್ಲ ಅಷ್ಟಮಿ
ದಿನಾಂಕ: ೩೦.೦೯.೨೦೨೫

ಇಂತಿ ವಿಜ್ಞಾಪಿಸುವ
ಬೇಂಗ್ರೋಡಿ ಕೃಷ್ಣರಾಜ ಭಟ್ಟ
ಶೃಂಗೇರಿ.

ॐ

ಶ್ರೀ ಅಗಲ್ಪಾಡಿಮಾಹಾತ್ಮ್ಯಮ್

॥ ಅಥ ಪ್ರಥಮ: ಸ್ತಬಕ: ॥

ವಂದೇ ವಂದಾರುಲೋಕಪ್ರಣಿಹಿತವಿಮಲಾನಂದಸಂದೋಹಮಾಲಾಂ
ಬಾಲಾಂ ಬಾಲಾರ್ಕಕೋಟಿಪ್ರತಿಮಸುಷಮಯಾ ಭಾಸುರಾಂ ಭೂಸುರಾಣಾಮ್ ।
ಸಂಸಾರಾಮೋಘಕೃತ್ಯಪ್ರಚಲನವಿಧೃತಾನಂದಸತ್ಕಲ್ಪವಲ್ಲೀಂ
ಕಲ್ಯಾಗಲ್ಪಾಡಿಲೋಕೋದ್ಧರಣಕೃತಪದಾಂ ಭಕ್ತನಮ್ರಾಂ ಭವಾನೀಮ್ ॥ ೧ ॥

ವಂದಿಸುವ ಜನರಿಗೆ ಪರಿಶುದ್ಧವಾದ ಆನಂದಸಮೂಹ ಪರಂಪರೆಯನ್ನು ಕರುಣಿಸುವಂತಹವಳೂ, ಚಿರಯುವತಿಯೂ, ಕೋಟಿಬಾಲಸೂರ್ಯರ ಪ್ರಭೆಗೆ ಸಮಾನವಾದ ಪರಮಶೋಭೆಯಿಂದ ಪ್ರಕಾಶಮಾನಳೂ, ಸಂಸಾರದ ಅಮೋಘ ಸೃಷ್ಟಿ, ಸ್ಥಿತಿ, ಲಯಗಳ ಕಲ್ಪಲತೆಯಾಗಿ ಅಗಲ್ಪಾಡಿಯಲ್ಲಿ ಜನರ ಉದ್ಧಾರಕ್ಕಾಗಿ ನೆಲೆಸಿರುವ ಭಕ್ತಪರಾಧೀನಳೂ ಆದ ಭವಾನಿಯನ್ನು ವಂದಿಸುತ್ತೇನೆ.

ವಾರಾಣಸ್ಯಾಂ ಕಶ್ಚಿದಾಸೀತ್ ಪುರಾಣೋ ವಿಪ್ರಾಗ್ರಣ್ಯೋ ದೇವಿಕಾರಾಷ್ಟ್ರಜನ್ಮಾ ।
ವಿಶ್ವಾರಾಧ್ಯಂ ವಿಶ್ವನಾಥಂ ಸ್ತುವಾನೋ ದೇವೀಂ ದುರ್ಗಾಮನ್ನಪೂರ್ಣೇಶ್ವರೀಂ ಚ ॥ ೨ ॥

ಹಿಂದೆ ವಾರಾಣಸಿಯಲ್ಲಿ ವೃದ್ಧನಾದ, ದೇವಿಕಾರಾಷ್ಟ್ರದಲ್ಲಿ ಜನಿಸಿದಂತಹ ಜಗದ್ವಂದ್ಯನಾದ ವಿಶ್ವನಾಥನನ್ನೂ, ದುರ್ಗಾದೇವಿಯನ್ನೂ, ಅನ್ನಪೂರ್ಣೇಶ್ವರಿಯನ್ನೂ ಆರಾಧಿಸುತ್ತಿದ್ದಂತಹ ವಿಪ್ರೋತ್ತಮನೊಬ್ಬನಿದ್ದನು.

ಕ್ರಿಯಾಕಲಾಪಂ ಜಗದಾತ್ಮನೀಶ್ವರೇ ವಿಲಾಪಯನ್ ಮುಕ್ತಸಮಸ್ತಬಂಧನಃ ।
ಅತಪ್ಯತಾಸೌ ಜಗತೋ ಹಿತೇಚ್ಛಯಾ ಪರೋಪಕಾರಾಯ ಹಿ ಸಾಧುಜೀವಿತಮ್ ॥ ೩ ॥

ಈತನು ಸಕಲ ಚರಾಚರಪ್ರಪಂಚರೂಪನಾದ ಪರಮಾತ್ಮನಲ್ಲಿ ತನ್ನೆಲ್ಲಾ ಕಾರ್ಯಕಲಾಪಗಳನ್ನು ವಿಲೀನಗೊಳಿಸಿ ಎಲ್ಲಾ ಸಾಂಸಾರಿಕ ಬಂಧನಗಳನ್ನು ತೊರೆದು ಜಗತ್ತಿಗೆ ಒಳಿತನ್ನು ಮಾಡುವ ಅಪೇಕ್ಷೆಯಿಂದ ತಪಸ್ಸನ್ನು ಆಚರಿಸುತ್ತಿದ್ದನು, ಸಜ್ಜನರ ಜೀವನವು ಪರೋಪಕಾರಕ್ಕಾಗಿಯೇ ಮೀಸಲಷ್ಟೆ?

ತಪಸ್ಯತಸ್ತಸ್ಯ ತದೀಯರಾಷ್ಟ್ರಜಾ ಮಹೀಸುರಾ ಭೀಕರರಾಜದಸ್ಯುಭಿಃ ।
ಪ್ರಪೀಡಿತಾಃ ಪ್ರಾಣಪರೀಪ್ಸಯಾ ತತೋ ವಿದುದ್ರುವುರ್ಧ್ಯಾನಪರಾ ದಿಶೋಽಪರಾಃ ॥ ೪ ॥

ಹೀಗೆ ತಪಸ್ಸನ್ನಾಚರಿಸುತ್ತಿರುವ ಅವನ ಊರಿನ ಬ್ರಾಹ್ಮಣರು ಭಯಂಕರರಾದ (ದರೋಡೆಕೋರ) ಕಳ್ಳರಿಂದ ಪೀಡಿಸಲ್ಪಟ್ಟು ಪ್ರಾಣವನ್ನುಳಿಸುವುದಕ್ಕೋಸ್ಕರ ಚಿಂತಿತರಾಗಿ ಅಲ್ಲಿಂದ ನಾನಾ ದಿಕ್ಕುಗಳಿಗೆ ಓಡಿದರು.

ತೇ ಧಾರವಾಡೇಪಿ ಚ ಪುಣ್ಯಪತ್ತನೇ ಭ್ರೂವಲ್ಲಿಕಾಯಾಮಪಿ ಕೇರಲಾದಿಷು ।
ಶೈಲೇಂದ್ರಕುಂಜೇಷು ನಿಲಿಲ್ಯಿರೇ ಭಯಾತ್ ಸಾಮುದ್ರತೀರೇಷು ಚ ಖರ್ವಟಾದಿಷು ॥ ೫ ॥

ಆ ಬ್ರಾಹ್ಮಣರು ಧಾರವಾಡದಲ್ಲಿಯೂ, ಪುಣೆಯಲ್ಲಿಯೂ, ಹುಬ್ಬಳ್ಳಿಯಲ್ಲಿಯೂ, ಕೇರಳ ಮೊದಲಾದ ರಾಜ್ಯಗಳ ಪರ್ವತದ ಗುಹೆಗಳಲ್ಲಿಯೂ, ಸಮುದ್ರತೀರದಲ್ಲಿರುವ ನದೀ–ಬೆಟ್ಟಗಳಿಂದ ಕೂಡಿದ ನಗರ ಮತ್ತು ಹಳ್ಳಿಗಳಲ್ಲಿಯೂ ಭಯದಿಂದ ರಹಸ್ಯವಾಗಿ ವಾಸಿಸುತ್ತಿದ್ದರು.

ವ್ಯತೀತ್ಯ ದೇಶಾನ್ ಸುಬಹೂನ್ ಮಹಾಶಯಾಃ ಪ್ರಪೇದಿರೇ ಕೇಚನ ಲಾವಣಾಜಿರಮ್ ।
ಅಮುತ್ರ ಚಾಲಬ್ಧವಿಮೃಷ್ಟವೃತ್ತಯೋ ವಿಬಭ್ರಮುಃ ಖಿನ್ನಧಿಯೋ ದಿಗಂತರೇ ॥ ೬ ॥

ಮಹಾತ್ಮರಾದ ಇವರಲ್ಲಿ ಕೆಲವರು ಅನೇಕ ಊರುಗಳನ್ನು ತಿರುಗಿ ಉಪ್ಪಂಗಳವನ್ನು ಸೇರಿದರು. ಇಲ್ಲಿಯೂ ಸರಿಯಾದ ಜೀವನೋಪಾಯವನ್ನು ಕಂಡುಕೊಳ್ಳಲಾಗದೆ ದುಃಖಿತರಾಗಿ ಎಲ್ಲಾ ಕಡೆ ಅಲೆದಾಡಿದರು.

ಸಮೇತ್ಯ ನಿಶ್ಚಿತ್ಯ ತತಶ್ಚ ಸರ್ವಕೇ ಸ್ವಕೀಯದುರ್ಗಾಧಿಹರಾಂ ಪರಾಂ ಶಿವಾಮ್ ।
ಸಿಷೇವಿರೇಽಭಿನ್ನಧಿಯೋ ಮಹೌಜಸಸ್ತದೀಯಪಾದಾಂಬುಜಯುಗ್ಮಮಂಜಸಾ ॥ ೭॥

ಅನಂತರ ಎಲ್ಲರೂ ಒಟ್ಟಾಗಿ ಪರಶಿವೆಯನ್ನು ತಮ್ಮ ಸಂಕಷ್ಟಪರಿಹಾರಕಳನ್ನಾಗಿ ನಿಶ್ಚಯಿಸಿ ಮಹಾತೇಜಸ್ವಿಗಳಾದ ಅವರೆಲ್ಲ ಏಕಾಗ್ರಚಿತ್ತರಾಗಿ ಆ ದುರ್ಗೆಯ ಪಾದಾರವಿಂದವನ್ನು ಭಕ್ತಿಯಿಂದ ಧ್ಯಾನಿಸಿದರು.

ಇತಿ ಪ್ರಪನ್ನೇಷು ಪದಾಂಬುಜಂ ದ್ವಿಜೇಷ್ವನನ್ಯಭಾವೇಷು ಪುರಾಣಬಾಡವಃ ।
ಪ್ರದರ್ಶಯಂತ್ಯಾ ನಿಜರೂಪಮಾತ್ಮನೇ ತಯಾಽಭ್ಯಧಾಯೀಶ್ವರಯಾ ಕೃಪಾರ್ದ್ರಯಾ ॥ ೮ ॥

ಈ ರೀತಿಯಾಗಿ ದೇವಿಯ ಚರಣಾರವಿಂದವನ್ನು ಶರಣುಹೊಂದಿದ, ಅನನ್ಯಭಾವವನ್ನು ಹೊಂದಿದ ಬ್ರಾಹ್ಮಣರಲ್ಲಿ ಓರ್ವ ವೃದ್ಧಬ್ರಾಹ್ಮಣನಿಗೆ ದಯಾಪೂರ್ಣಳಾದ ಪರಮೇಶ್ವರಿಯು ತನ್ನ ರೂಪವನ್ನು ಪ್ರದರ್ಶಿಸಿ ಹೀಗೆಂದು ನುಡಿದಳು.

ದ್ವಿಜೋತ್ತಮೋತ್ತಿಷ್ಠ ವಿಲೋಕಯ ಕ್ಷಣಂ ಹ್ಯಪೂರ್ವಮತ್ಯದ್ಭುತಮಾತ್ಮವೈಶಸಮ್ ।
ಚರಂತಿ ಲೋಕೇಷು ವಿಪನ್ನಬಂಧವೋ ಭವತ್ಪ್ರಧಾನಾ ಭವದೀಯಬಂಧವಃ ॥ ೯ ॥

ಹೇ ವಿಪ್ರಶ್ರೇಷ್ಠನೇ! ಕ್ಷಣಕಾಲ ಇತ್ತ ನೋಡು, ಹಿಂದೆಂದೂ ಬಾರದ ಈ ನಿನ್ನ ದುಃಖವು ಅತ್ಯಂತ ವಿಸ್ಮಯಕರವು. ನೀನೇ ಮೊದಲಾಗಿ ನಿನ್ನ ಬಂಧುಗಳೂ ಸಹ ತೊಂದರೆಗೆ ಸಿಲುಕಿದವರಾಗಿ ಊರೂರು ಅಲೆದಾಡುತ್ತಿರುವಿರಿ.

ಸ್ವರಾಜ್ಯಮೇತತ್ ತವ ರಾಜದಸ್ಯುಭಿಃ ಪ್ರಪೀಡಿತಂ ಚಾದ್ಯ ವಿದೇಶವಾಸಿಭಿಃ ।
ಸಮುದ್ಧರೈನಾನ್ ಪ್ರತಿಮಾಂ ಗೃಹಾಣ ಮೇ ದ್ವಿಜೇಶ್ವರೈವಂ ವ್ರಜ ಲಾವಣಾಜಿರಮ್ ॥ ೧೦ ॥

ಈ ನಿನ್ನ ರಾಜ್ಯವು ಇಂದು ಬೇರೆಪ್ರದೇಶದ ದರೋಡೆಕೋರರಿಂದ ಹಿಂಸಿಸಲ್ಪಟ್ಟಿದೆ. ಈ ನನ್ನ ಪ್ರತಿಮೆಯನ್ನು ತೆಗೆದುಕೋ, ಈ ಬ್ರಾಹ್ಮಣರನ್ನು ಉದ್ಧರಿಸು, ಉಪ್ಪಂಗಳಕ್ಕೆ ಹೋಗು.

ಸಮುದ್ಧರಂಸ್ತಾಂ ಶಿರಸಾ ಮಹೇಶ್ವರೀಂ ವಹನ್ನವಾಚೀಂ ಮನಸಾ ಚ ನಿರ್ಯಯೌ ।
ಅಲಕ್ಷಿತಾಧ್ವಶ್ರಮ ಏಷ ಬಾಡವಃ ಕ್ಷಣಾದ್ವ್ಯತೀಯಾಯ ಸ ಚೋತ್ತರಾಪಥಮ್ ॥ ೧೧ ॥

ಆ ವೃದ್ಧಬ್ರಾಹ್ಮಣನು ಮಹೇಶ್ವರಿಯನ್ನು ತಲೆಯಲ್ಲಿರಿಸಿಕೊಂಡು, ಮನಸ್ಸಿನಲ್ಲೂ ಸ್ಮರಿಸುತ್ತಾ ದಕ್ಷಿಣದ ಕಡೆಗೆ ಹೊರಟನು. ಮಾರ್ಗಾಯಾಸವನ್ನು ಲೆಕ್ಕಿಸದೆ ಕೆಲವೇ ಸಮಯದಲ್ಲಿ ಉತ್ತರದೇಶವನ್ನು ದಾಟಿ ಹೋದನು.

ಸಮೇತ್ಯ ಚಾಸ್ಮಿನ್ ಲವಣಾಜಿರೇಽಪರಾನ್ ಸ್ವಕಾನ್ ಸಮಾಹೂಯ ಮಹೇಶ್ವರೀಗಿರಮ್ ।
ನಿವೇದ್ಯ ತೇಷ್ವೇಷ ಮಹೀಸುರೋತ್ತಮಾನ್ ಸಮುಜ್ಜಹಾರಾಽಶು ವಿಪನ್ಮಹಾರ್ಣವಾತ್ ॥ ೧೨ ॥

ಉಪ್ಪಂಗಳಕ್ಕೆ ಬಂದು, ತಮ್ಮವರಾದ ಉಳಿದ ದ್ವಿಜೋತ್ತಮರನ್ನು ಕರೆದು, ಅವರಿಗೆ ಮಹೇಶ್ವರಿಯ ಮಾತನ್ನು ತಿಳಿಸಿ, ಅವರನ್ನು ಬೇಗನೆ ಆಪತ್ತೆಂಬ ಸಮುದ್ರದಿಂದ ಉದ್ಧರಿಸಿದನು.

ಸ ಲಾವಣಾಂತರ್ಭುವಿ ತೈಃ ಸಮನ್ವಿತಸ್ತತಃ ಪ್ರತಿಷ್ಠಾಪ್ಯ ಮುಹೂರ್ತತಲ್ಲಜೇ ।
ಸದನ್ನಪೂರ್ಣಾಪ್ರತಿಮಾಂ ಮಹಾಮನಾಃ ಪ್ರಮೋದಭಾರಂ ಸಮುವಾಹ ನಿರ್ಭರಮ್ ॥ ೧೩ ॥

ಮಹಾನುಭಾವನಾದ ಅವನು ಅವರೆಲ್ಲರಿಂದೊಡಗೂಡಿ ಪ್ರಶಸ್ತವಾದ ಮುಹೂರ್ತದಲ್ಲಿ ಉಪ್ಪಂಗಳದಲ್ಲಿ ಅನ್ನಪೂರ್ಣೆಯ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಅಮಿತಾನಂದವನ್ನು ಹೊಂದಿದನು.

ಶಿವಾಪ್ರತಿಷ್ಠಾಪನಮತ್ರ ದೇಶಿಕಃ ಸ ಶಾಲಿವಾಹಾಬ್ದಶತಾಧಿಪಂಚಕೇ ।
ವಿವೃದ್ಧಯೇಽಸ್ಮತ್ಕರಹಾಟಜನ್ಮನಾಂ ಮಹೀಸುರಾಣಾಂ ವ್ಯತನೋಚ್ಛಿವಾಜ್ಞಯಾ ॥ ೧೪ ॥

ಆ ಬ್ರಾಹ್ಮಣನು ಕರಹಾಟ ಬ್ರಾಹ್ಮಣರಾದ ನಮ್ಮ ಅಭಿವೃದ್ಧಿಗೋಸ್ಕರ ಪಾರ್ವತಿಯ ಅಪ್ಪಣೆಯಂತೆ ಈ ಶಾಲಿವಾಹನಶಕವರ್ಷ ೧೦೫ ರಲ್ಲಿ ಉಪ್ಪಂಗಳ ಪರಿಸರದಲ್ಲಿ ದೇವಿಯ ಪ್ರತಿಷ್ಠೆಯನ್ನು ಮಾಡಿದನು.

ಸಹೋನ್ನಾದೈರ್ಲಾಸ್ಯೈಸ್ತದನು ಮಹತಾಂ ವಿಪ್ರಜನುಷಾಂ
ಸಶಂಖಾನಾಂ ಭೇರೀಪಟಹಮುರಜಾನಾಂ ಘನರವಃ ।
ಸಮುದ್ಯನ್ನಾನಂದಂ ಖಚರಕುಲಜಾನಾಂ ಪ್ರತಿದಿಶಂ
ವಿತೇನೇ ವಿಷ್ವದ್ರ್ಯಜ್ ಪ್ರತಿರವಕರೀಂದ್ರಾನ್ ಪರಿಹರನ್ ॥ ೧೫॥

ನಂತರ ಉನ್ನತಸ್ವರದ ಜಯಘೋಷ ಮತ್ತು ನಾಟ್ಯದೊಂದಿಗೆ ವಿಪ್ರರು ಮಾಡಿದ ಶಂಖ–ಢಕ್ಕೆ–ನಗಾರಿ–ಮೃದಂಗಗಳ ಕಂಚಿನ ಸ್ವರವು ಗಂಧರ್ವಾದಿಗಗನಚಾರಿಗಳಿಗೆ ಆನಂದವನ್ನುಂಟುಮಾಡುತ್ತಾ, ಪ್ರತಿಧ್ವನಿಗೈಯ್ಯುವ ದಿಗ್ಗಜಗಳನ್ನೂ ಲೆಕ್ಕಿಸದೆ ದಿಕ್ಕು–ದಿಕ್ಕುಗಳೆಲ್ಲೆಡೆಯೂ ವ್ಯಾಪಿಸಿತು.

ಅಥಾಂಬಿಕಾನುಗ್ರಹತೋ ದ್ವಿಜೋತ್ತಮಾಃ ಸಮಾತ್ತಸರ್ವಾರ್ಥಫಲಾಭಿವೃದ್ಧಯಃ ।
ನ ಸಸ್ಮರುಃ ಕಂಚನ ಜನ್ಮಭೂಮಿಜಂ ಸುಖಾನುಭಾವಂ ಸ್ವರಿತಾ ಇವಾಪರಮ್ ॥ ೧೬ ॥

ನಂತರ ಜಗದಂಬಿಕೆಯ ಅನುಗ್ರಹದಿಂದ ಆ ಬ್ರಾಹ್ಮಣೋತ್ತಮರು ಸಕಲ ಇಷ್ಟಾರ್ಥಫಲಸಮೃದ್ಧಿಗಳನ್ನು ಪಡೆದವರಾಗಿ, ಇನ್ನೊಂದು ಸ್ವರ್ಗವನ್ನೇ ಹೊಂದಿದವರಂತೆ ತಮ್ಮ ಜನ್ಮಭೂಮಿಯ ಸುಖದ ಮಹಿಮೆಯನ್ನು ಸ್ವಲ್ಪವೂ ಸ್ಮರಿಸಲಿಲ್ಲ.

ತತಃ ಸ ವಾಹೀಕಪುರೇ ಪಯಸ್ವಿನೀತಟೇ ಚ ಕಂಗೂತ್ಥಮಹೀತಲೇऽಪಿ ಚ ।
ವಿವೃತ್ಯ ಶಕ್ತಿತ್ರಯಮೀಶ್ವರೀಗಿರಾ ಚಕಾರ ಚತ್ವಾರಿ ಪದಾನಿ ದೇಶಿಕಃ ॥ ೧೭ ॥

ನಂತರ ಆ ಬ್ರಾಹ್ಮಣನು ಬಾಯಾರಿನಲ್ಲಿ, ಪಯಸ್ವಿನೀ ನದೀತೀರದ ತೈರೆಯಲ್ಲಿ, ಹಾಗೂ ಕೊಂಗೂರಿನಲ್ಲಿ ದೇವಿಯ ಮಾತಿನಂತೆ ಮೂರು ಶಕ್ತಿಗಳನ್ನು ಪ್ರತಿಷ್ಠಾಪಿಸಿ, ಒಟ್ಟು ನಾಲ್ಕು ದೇವೀಸ್ಥಾನಗಳನ್ನು ಸ್ಥಾಪಿಸಿದನು.

ತತಸ್ತದಾರಾಧನಕಲ್ಪಕಲ್ಪಿತೈರಹರ್ನಿಶಂ ವೈದಿಕತಾಂತ್ರಿಕೈರ್ದ್ವಿಜಾಃ ।
ಪ್ರವೃದ್ಧಭಕ್ತ್ಯುತ್ಕಲಿತಾಂತರಾಃ ಪರಾಂ ಮಹೇಶ್ವರೀಂ ತಾಮಯಜನ್ ಮಹಾಮಖೈಃ ॥ ೧೮ ॥

ನಂತರ ಆ ದೇವಿಯ ಆರಾಧನಾವಿಧಿಗಾಗಿ ಮಾಡಿದ ವೈದಿಕ–ತಾಂತ್ರಿಕ ಕ್ರಮಗಳಿಂದ ಹಗಲೂರಾತ್ರಿ ಪೂಜಿಸುತ್ತಿದ್ದ ವಿಪ್ರರು ದೃಢಭಕ್ತಿಯಿಂದ ಕೂಡಿದ ಅಂತರಂಗವುಳ್ಳವರಾಗಿ ಮಹಾಯಾಗಗಳಿಂದ ಆ ಪರಮೇಶ್ವರಿಯನ್ನು ಆರಾಧಿಸಿದರು.

ತತೋಽನ್ನಪೂರ್ಣಾಮಹಿಮಾನುಭಾವತಃ ಸಮೃದ್ಧಸಂಪದ್ಗುಣಕರ್ಮವೃತ್ತಯಃ ।
ವಿರೇಜಿರೇ ಬಾಡವಸತ್ತಮಾಃ ಪರಂ ವಿವೃದ್ಧವೇದಾಧ್ಯಯನಾದಿಕರ್ಮಭಿಃ ॥ ೧೯ ॥

ನಂತರ ಅನ್ನಪೂರ್ಣೆಯ ಮಹಿಮಾಪ್ರಭಾವದಿಂದ ಸಂಪತ್ತು–ಸದ್ಗುಣ–ಸತ್ಕರ್ಮ–ಸದ್ವ್ಯವಹಾರಗಳನ್ನು ಹೊಂದಿದ ವಿಪ್ರೋತ್ತಮರು ನಿರಂತರ ವೇದಾಧ್ಯಯನಾದಿ ಕರ್ಮಗಳಿಂದ ಅಧಿಕವಾಗಿ ಶೋಭಿಸಿದರು.

ಇಹಾಗರೋಽಂಧಃ ಪರಿಕೀರ್ತ್ಯತೇ ಬುಧೈಃ ಸ ಯಜ್ಞಶಿಷ್ಟಾಮೃತವಾಚಕೋಽಪಿ ವಾ ।
ರಲೋರಭೇದೇನ ಚ ಪಾಡಿಸಂಸ್ಥಿತಂ ವದಂತ್ಯಗಲ್ಪಾಡಿಪದಂ ಪುರಾವಿದಃ ॥ ೨೦ ॥

ಇಲ್ಲಿ ಪಂಡಿತರಿಂದ ಅಗರ ಶಬ್ದಕ್ಕೆ ಅನ್ನ ಎಂಬರ್ಥವು ಹೇಳಲ್ಪಡುತ್ತದೆ, ಅಥವಾ ಅಗರವೆಂದರೆ ಯಾಗದ ಅವಶಿಷ್ಟವಾದ ಹವಿಸ್ಸು ಎಂದರ್ಥ. ಶಾಸ್ತ್ರದಲ್ಲಿ 'ರ' ಮತ್ತು 'ಲ' ಗಳು ಒಂದೇ ಎಂದು ವ್ಯವಹಾರವಿರುವುದರಿಂದ ಅಗರ(ಲ)ದ [ಅನ್ನದ] ಪಾಡಿ=ಸ್ಥಾನ ಎಂಬರ್ಥದಲ್ಲಿ ಅಗಲ್ಪಾಡಿ ಎಂದು ಚರಿತ್ರೆಯನ್ನು ಬಲ್ಲವರು ಕರೆಯುತ್ತಾರೆ.

ಇತಿ ವಿಧಾಯ ಸ ದೇಶಿಕಸತ್ತಮಃ ಸಮನುಗೃಹ್ಯ ಚ ಭೂಸುರಸತ್ತಮಾನ್ ।
ಹರಪದಾಬ್ಜಸಿಷೇವಿಷಯಾ ತತಃ ಶುಕಮುನೀಂದ್ರಗುಣೋಽಥ ತಿರೋದಧೇ ॥ ೨೧ ॥

ಈ ರೀತಿಯಾಗಿ ಮಾಡಿ ಆ ವಿಪ್ರಶ್ರೇಷ್ಠನು ಬ್ರಾಹ್ಮಣೋತ್ತಮರನ್ನು ಅನುಗ್ರಹಿಸಿ ಶಿವನ ಪಾದಸೇವೆಯ ಬಯಕೆಯುಳ್ಳವನಾಗಿ ಶುಕಮಹರ್ಷಿಗಳಂತೆ ಯೋಗಶಕ್ತಿಯುಳ್ಳವನಾದ್ದರಿಂದ ಅಲ್ಲಿಂದ ಅದೃಶ್ಯನಾದನು.

ಕ ಆಯಾಸೋ ಲೋಕೋದ್ಧರಣಕೃತಯೇ ಪ್ರಾಪ್ತಜನುಷಾಂ
ವಿಷಾದಃ ಕೋ ವಾ ಸ್ಯಾದತುಲಪರಮಾನಂದನಿಭೃತಾಮ್ ।
ಯದಧ್ವಾನಂ ದೀರ್ಘಂ ಸಪದಿ ನಿಭೃತಾನಂದಕಲಿಕೋ
ಲಘಿಮ್ನಾ ವ್ಯತ್ಯೈಷೀಚ್ಚರಿತಮತುಲಂ ಭೂರಿ ಮಹತಾಮ್ ॥ ೨೨ ॥

ಲೋಕೋದ್ಧಾರಕ್ಕಾಗಿಯೇ ಜನ್ಮತಳೆದಂತಹವರಿಗೆ ಆಯಾಸವು ಎಲ್ಲಿಯದು? ಅಪರಿಮಿತಪರಮಾನಂದಭರಿತರಾದವರಿಗೆ ದುಃಖವಾದರೋ ಎಲ್ಲಿಯದು? ಯಾಕೆಂದರೆ ಪರಮಾನಂದಭರಿತನಾದ ವಿಪ್ರನು ದೀರ್ಘವಾದ ಮಾರ್ಗವನ್ನು ಬೇಗನೆ ಲಘುವಾಗಿ ಪರಿವರ್ತಿಸಿದನು. ಮಹಾತ್ಮರ ಚರಿತ್ರೆಯು ಅತ್ಯಂತ ಅಸಾಮಾನ್ಯವಾಗಿರುವುದು.

॥ ಇತ್ಯಗಲ್ಪಾಡಿಮಾಹಾತ್ಮ್ಯೇ ಪ್ರಥಮಃ ಸ್ತಬಕಃ ॥
ಇಲ್ಲಿಗೆ ಅಗಲ್ಪಾಡಿಮಹಾತ್ಮೆಯಲ್ಲಿ ಮೊದಲನೆಯ ಸ್ತಬಕವು ಮುಗಿಯಿತು.

॥ ಅಥ ದ್ವಿತೀಯಃ ಸ್ತಬಕಃ ॥

ತತೋಽತಿಯಾತಾಸು ಶರತ್ಸು ಕಾಸುಚಿತ್ ಪ್ರಸರ್ಪತೋ ರಾಜಭಯಾದಿತಸ್ತತಃ ।
ಉದಾಪತನ್ ಕೇಚನ ಭೂಸುರೋತ್ತಮಾಃ ಪರಾಮೃಶಂತಃ ಪದವೀಂ ಪುರಾತನೀಮ್ ॥ ೧ ॥

ನಂತರ ಕೆಲವು ವರ್ಷಗಳು ಕಳೆಯಲು, ಎಲ್ಲಾಕಡೆ ಹರಡುತ್ತಲಿರುವ ರಾಜಭಯದಿಂದ ಕೆಲವು ಬ್ರಾಹ್ಮಣೋತ್ತಮರು ತಮ್ಮ ಹಿಂದಿನ ದಾರಿಯನ್ನು ಅರಸುತ್ತಾ ಹೊರಟರು.

ಪರೇ ಚ ತಾನ್ ಕೇಚನ ಭವ್ಯದೃಷ್ಟಯೋ ವಿಮೃಶ್ಯ ಪೂರ್ವಾಪರಕಾರ್ಯಸಂಗತಿಮ್ ।
ಅಕಾರ್ಯಕಾರ್ಯಗ್ರಹಣಾಭಿಲಾಷುಕಾನ್ ಮಹಾರ್ಥವಾಕ್ಯೈ ರುರುಧುಃ ಪ್ರಜಲ್ಪಿತೈಃ ॥ ೨ ॥

ಇನ್ನುಕೆಲವು ದೂರದೃಷ್ಟಿಯುಳ್ಳ ಬ್ರಾಹ್ಮಣರು ಪೂರ್ವಾಪರಕಾರ್ಯಸಾಮಂಜಸ್ಯವನ್ನು ವಿಮರ್ಶಿಸಿ ತಪ್ಪಾದ ಕಾರ್ಯವನ್ನು ಮಾಡಲಭಿಲಾಷೆಯುಳ್ಳ ಅವರನ್ನು ಅರ್ಥವತ್ತಾದ ವಾಕ್ಯಗಳಿಂದ ಕೂಡಿದ ಹಿತವಚನಗಳಿಂದ ತಡೆದರು.

ನ ರಾಜಭೀತಿರ್ಗಿರಿರಾಜಕನ್ಯಕಾಪ್ರಸಾದತೋಽಸ್ಮಾಕಮಿಹಾಽಪತಿಷ್ಯತಿ ।
ಅಲಂ ಬಲಾನ್ನಿರ್ಗಮಸಂಭ್ರಮೇಣ ವೋ ನಿರಂಕುಶಾಃ ಸಂದಧತೇ ಕಿಲಾಪದಮ್ ॥ ೩ ॥

ಪರ್ವತರಾಜನ ಕನ್ಯೆಯಾದ ಪಾರ್ವತಿಯ ಪ್ರಸಾದದಿಂದ ನಮಗೆ ಇಲ್ಲಿ ರಾಜಭಯವು ಉಂಟಾಗುವುದಿಲ್ಲ. ಹಾಗಾಗಿ ಬಲವಂತದಿಂದ ಹೊರಡುವ ಅವಸರವು ನಿಮಗೆ ಬೇಡ. ನಿಗ್ರಹವಿಲ್ಲದವರು ಖಂಡಿತವಾಗಿಯೂ ಆಪತ್ತನ್ನು ಹೊಂದುತ್ತಾರೆ.

ಕ ಏಷ ವೋ ದುರ್ಮತಿಶಾಲಿನಾಂ ಪರಃ ಸಮುದ್ಯಮಃ ಕಲ್ಮಷನಾಶಿನೀಂ ಶಿವಾಮ್ ।
ವಿಹಾಯ ವೈರ್ಯುದ್ಧೃತದೇಶಸರ್ಪಣೇ ನ ಸಾಧು ತಸ್ಮಿನ್ ಭವತಾಂ ಭವಿಷ್ಯತಿ ॥ ೪ ॥

ದುರ್ಬುದ್ಧಿಯಿಂದ ಕೂಡಿದ ನಿಮಗೆ ಪಾಪನಾಶಕಳಾದ ದುರ್ಗೆಯನ್ನು ತೊರೆದು ವೈರಿಗಳಿಂದ ಆಕ್ರಮಿಸಲ್ಪಟ್ಟ ದೇಶಕ್ಕೆ ಹೋಗುವ ದುಃಸಾಹಸವು ಯಾಕೆ? ಅಲ್ಲಿ ನಿಮಗೆ ಒಳಿತಾಗುವುದಿಲ್ಲ.

ಪುರಾ ಮುರಾರಿಃ ಪುರುದಸ್ಯುಪೀಡಿತಂ ಪುರಂ ವಿಹಾಯಾಪರಮೀಯಿವಾನ್ ಪುರಮ್ ।
ಸಸರ್ಪಬಾಧಂ ದಹನೋಪಸರ್ಜಿತಂ ಸಶತ್ರುಕಂ ತ್ಯಾಜ್ಯಮಿತಿ ಪ್ರಚಕ್ಷತೇ ॥ ೫ ॥

ಹಿಂದೆ ಕೃಷ್ಣನು ಪುರುದಸ್ಯು (ಜರಾಸಂಧ) ವಿನಿಂದ ಆಕ್ರಮಿಸಲ್ಪಟ್ಟ (ಮಥುರಾ) ನಗರವನ್ನು ತೊರೆದು ಬೇರೆ (ದ್ವಾರಕಾ) ನಗರವನ್ನು ಸೇರಿದನು. ಸರ್ಪಬಾಧೆಯಿಂದ ಕೂಡಿದ, ಬೆಂಕಿಯಿಂದ ಆವೃತವಾದ, ಶತ್ರುಪೀಡಿತವಾದ ಊರು ತ್ಯಾಜ್ಯವೆಂದು ಹೇಳಲ್ಪಡುತ್ತದೆ.

ನಿಷಿದ್ಧಯಾತ್ರಾ ಅಪಿ ತೇ ಸ್ವವಂಶಜೈಃ ಸ್ವಪೂರ್ವಜೋಚ್ಛಿಷ್ಟಮಹೀತಲಾತುರಾಃ ।
ಪರಾಪತನ್ ಕಾಂಚನ ಶಕ್ತಿವಿಗ್ರಹಾಂ ವಿಹಾರಯಂತೋ ಗಿರಿರಾಜಕನ್ಯಕಾಮ್ ॥ ೬ ॥

ತಮ್ಮ ವಂಶದವರಿಂದ ತಡೆಯಲ್ಪಟ್ಟರೂ ಸಹ ಅವರು ತಮ್ಮ ಪೂರ್ವಜರು ಅನುಭವಿಸಿದ ಭೂಮಿಯ ಆಸ್ಥೆ ಉಳ್ಳವರಾಗಿ ಪಾರ್ವತಿಯ ಶಕ್ತಿ ಉಳ್ಳ ವಿಗ್ರಹವನ್ನು ಹಿಡಿದುಕೊಂಡು ಹೊರಟರು.

ಸಮುತ್ಸರಂತೋಽಥ ದಿವಾನಿಶಂ ದ್ವಿಜಾಃ ಕ್ರಮಾದ್ವ್ಯತೀಯುಃ ಕಿಲ ದೇಶಸಂಚಯಮ್ ।
ಅಲಕ್ಷಿತೋಮಾಶಯಭಾವನಿಃಸೃತಾಸ್ತಥಾಽಪದಂ ಪ್ರಾಪುರಥೋ ನ ಸೇಹಿರೇ ॥ ೭ ॥

ನಂತರ ಹಗಲೂ-ರಾತ್ರಿಯೂ ಸಂಚರಿಸುತ್ತಾ ಆ ಬ್ರಾಹ್ಮಣರು ಕ್ರಮವಾಗಿ ಅನೇಕ ದೇಶಗಳನ್ನು ದಾಟಿದರು. ಪಾರ್ವತಿಯ ಹೃದಯದ ಇಂಗಿತವನ್ನು ತಿಳಿಯದೆ ಅಲ್ಲಿಂದ ಹೊರಟ ಅವರು ತೊಂದರೆಗಳನ್ನು ಅನುಭವಿಸಿದರು ಮತ್ತು ಅದನ್ನು ಸಹಿಸಲು ಅವರಿಂದಾಗಲಿಲ್ಲ.

ಅತೀತ್ಯ ತೇ ಕೇರಲಕೋಲಕೊಂಕಣಾನ್ ಸನೇತವಾಲೀನ್ ವಿಷಯಾನ್ ಜಗಾಹಿರೇ ।
ದಶೈಕಮಾಸಂ ನ್ಯವಸಂಶ್ಚ ತತ್ರ ತೇ ಸ್ವದೇಶವೃತ್ತಂ ವಿಮೃಶಂತ ಉಚ್ಚಕೈಃ ॥ ೮ ॥

ಅವರು ಕೇರಳ–ಕೋಲ–ಕೊಂಕಣ ರಾಜ್ಯಗಳನ್ನು ದಾಟಿ ಸನೇತವಾಲಿ ಪ್ರದೇಶವನ್ನು ಸೇರಿದರು. ಅಲ್ಲಿ ಅವರು ತಮ್ಮ ಊರಿನ ವೃತ್ತಾಂತವನ್ನು ಬಹಳವಾಗಿ ಚಿಂತಿಸುತ್ತಾ ಹನ್ನೊಂದು ತಿಂಗಳುಗಳ ಕಾಲ ವಾಸಿಸಿದರು.

ಪರೈರಧಿಕ್ರಾಂತಮಶೇಷಮಾತ್ಮನೋऽಪ್ಯಗಮ್ಯತಾಮೇತ್ಯ ನಿರಾಶತಾಂ ಗತಾಃ ।
ತತಃ ಪರಾವೃತ್ಯ ಪರಾಭಿಭೂತಯಾ ಮನೋऽನುವೃತ್ತ್ಯಾ ತ್ವರಿತಂ ಪ್ರತಸ್ಥಿರೇ ॥ ೯ ॥

ಸಂಪೂರ್ಣವಾಗಿ ಬೇರೆಯವರಿಂದ ಆಕ್ರಮಿಸಲ್ಪಟ್ಟ ಊರಿಗೆ ತಮಗೂ ಪ್ರವೇಶಿಸಲಾಗದಂತಾಗಿ ನಿರಾಸೆಯನ್ನು ಹೊಂದಿ, ಅವಮಾನಿತ ಭಾವನೆಯಿಂದ ಅಲ್ಲಿಂದ ಹಿಂದಿರುಗಿ ಬೇಗನೆ ಹೊರಟರು.

ಪರಾವೃತಾಸ್ತೇ ಪರಿವೃತ್ತತೇಜಸೋ ವಿಚಿಂತಯಂತಃ ಸ್ವಜನಾಭಿಭಾಷಿತಮ್ ।
ತತಸ್ತತೋಪಾಸ್ತಸಮಸ್ತವಿಭ್ರಮಾಃ ಪಥಿ ವ್ಯಲಂಬಂತ ವಿಷಣ್ಣಚೇತಸಃ ॥ ೧೦ ॥

ಹಿಂದಿರುಗಿದಂತಹ, ಕ್ಷೀಣವಾದ ತೇಜಸ್ಸುಳ್ಳ ಅವರು ದಾರಿಯಲ್ಲಿ ತಮ್ಮವರ ಮಾತನ್ನು ಚಿಂತಿಸುತ್ತಾ, ತತ್ಸಂಬದ್ಧವಾದ ಎಲ್ಲಾ ಭ್ರಾಂತಿಯನ್ನು ತೊರೆದವರಾಗಿ ಖಿನ್ನಮನಸ್ಕರಾಗಿ ನಿಧಾನಗತಿಯಲ್ಲಿ ಸಾಗಿದರು.

ಪರಾವರೇಷಾಂ ಜನನೀದಯಾಲುತಾಪದಂ ಪ್ರಪದ್ಯಾಪಿ ವಿಪನ್ನಬುದ್ಧಯಃ ।
ಸ್ವಜನ್ಮಭೂಮಿಸ್ಥಿರಕಾಮುಕಾ ವಯಂ ಬಲಾದ್ಧತಾಃ ಸ್ಮಃ ಕಿಲ ದೈವವಂಚಿತಾಃ ॥ ೧೧ ॥

ಉತ್ಕೃಷ್ಟಾಪಕೃಷ್ಟರೆಲ್ಲರಿಗೂ ತಾಯಿಯಾದಂತಹವಳ ಕೃಪಾಪಾತ್ರರಾದರೂ ಬುದ್ಧಿಹೀನರಾಗಿ ನಮ್ಮ ಜನ್ಮಭೂಮಿಯ ಲಾಲಸೆಯನ್ನು ಹೊಂದಿದಂತಹ ನಾವು ವಿಧಿಯಿಂದ ವಂಚಿತರಾಗಿ ಬಲವಂತವಾಗಿ ಮೋಸಹೋಗಿದ್ದೇವೆ.

ಕಿಮೀದೃಶಂ ಕರ್ಮ ಕೃತಂ ಹತಾತ್ಮಭಿಃ ಸ್ವಬಂಧುವಾಕ್ಯಂ ಮಹದೇತದುಜ್ಝಿತಮ್ ।
ಕಥಂ ನು ತೇಷಾಂ ವದನಾವಲೋಕನಂ ವಯಂ ವಿದಧ್ಯಾಮ ವಿಲಜ್ಜಿತಾನನಾಃ ॥ ೧೨ ॥

ಜ್ಞಾನಹೀನರಾದ ನಮ್ಮಿಂದ ಯಾಕಾಗಿ ಇಂತಹ ಕಾರ್ಯವು ಮಾಡಲ್ಪಟ್ಟಿತು? ಮಹತ್ತರವಾದ ಬಂಧುವಚನವು ತಿರಸ್ಕರಿಸಲ್ಪಟ್ಟಿತು. ನಾಚಿಗೆಗೆಟ್ಟಮುಖವುಳ್ಳ ನಾವು ಅವರ ಮುಖವನ್ನು ಹೇಗೆ ತಾನೇ ನೋಡುವುದು?

ಇತಿ ವ್ರಜಂತಃ ಕುಟಜಾದ್ರಿಮುತ್ತಮಂ ಮಹೀಭೃತಾಂ ಸಚ್ಚರಿತಂ ವ್ಯಲೋಕಯನ್ ।
ಮಹೇಶ್ವರಾವಾಸಕೃತೇ ಹಿತೈಷಿಣಾ ವಿನಿರ್ಮಿತಂ ವಿಶ್ವಸೃಜೇವ ಮಂದಿರಮ್ ॥ ೧೩ ॥

ಈ ರೀತಿ ಯೋಚಿಸುತ್ತಾ ಹೋಗುತ್ತಿರುವ ಅವರು ಮಹೇಶ್ವರನ ವಾಸಕ್ಕೋಸ್ಕರ ಹಿತೈಷಿಯಾದ ಬ್ರಹ್ಮನಿಂದ ನಿರ್ಮಿಸಲ್ಪಟ್ಟ ಮಂದಿರವೋ ಎಂಬಂತಿರುವ ಪರ್ವತಗಳಲ್ಲಿ ಶ್ರೇಷ್ಠವಾದ ಕುಟಜಾದ್ರಿಯನ್ನು ನೋಡಿದರು.

ಧ್ರುವಂ ಮಣೀನಾಂ ಫಣಿನಾಂ ರಸಾತಲಾತ್ ವಿಭಿದ್ಯ ಭೂಮಿಂ ಚ ಯಮುತ್ಥಿತಂ ತ್ವಿಷಾಮ್ ।
ಜಗತ್ತ್ರಯೋದ್ರಿಕ್ತತಮೋನಿರಾಕೃತಿಸ್ಫುರತ್ಪ್ರಕಾಶಂ ನು ವಿಚಿತ್ರಧಾತುಭಿಃ ॥ ೧೪ ॥

ಪಾತಾಳದಿಂದ ಭೂಮಿಯನ್ನು ಭೇದಿಸಿ ಎದ್ದಂತಹ, ನಾಗಗಳ ಮಣಿಗಳ ಕಾಂತಿಯ ಪುಂಜದಂತಿರುವ ವಿಚಿತ್ರವಾದ ಧಾತುಗಳಿಂದ ಮೂರುಲೋಕಗಳಲ್ಲಿ ವ್ಯಾಪಿಸಿರುವ ಅಂಧಕಾರವನ್ನು ನೀಗಿಸುವಂತಹ ಪ್ರಜ್ವಲಿಸುವ ಪ್ರಕಾಶವುಳ್ಳ (ಕುಟಜಾದ್ರಿಯನ್ನು ನೋಡಿದರು.)

ಮಹೌಷಧೀನಾಂ ನಿಚಯೈರ್ವಿರಾಜಿತಂ ವಿರಾಜಿತಂ ಪುಷ್ಕರಪುಷ್ಪರೇಣುಭಿಃ ।
ಮಹಾಮಣೀನಾಂ ನಿಚಯೈರ್ವಿರಾಜಿತಂ ವಿರಾಜಿತಂ ಪುಷ್ಕರಪುಷ್ಪಭಾನುಭಿಃ ॥ ೧೫ ॥

ಮಹೌಷಧಿಗಳ ಸಮೂಹದಿಂದ ಶೋಭಿಸುತ್ತಿರುವ, ತಾವರೆಹೂವಿನ ಪರಾಗಗಳಿಂದ ಕಂಗೊಳಿಸುತ್ತಿರುವ, ಮಹಾಮಣಿಗಳ ರಾಶಿಯಿಂದ ಹೊಳೆಯುತ್ತಿರುವ ಗಗನದ ಪುಷ್ಪವಾಗಿರುವ ಸೂರ್ಯನ ಕಿರಣಗಳಿಂದ ಪ್ರಕಾಶಿಸುತ್ತಿರುವ (ಕುಟಜಾದ್ರಿಯನ್ನು) ನೋಡಿದರು.

ವಿಸೃಷ್ಟನಾನಾಗುಣಕರ್ಮವೃತ್ತಿಭಿರ್ವಿರಾಜಿತಂ ಯೋಗಿಭಿರಪ್ಯಹರ್ನಿಶಮ್ ।
ವಿಮೃಷ್ಟನಾನಾಗುಣಕರ್ಮವೃತ್ತಿಭಿರ್ವಿರಾಜಿತಂ ಭೋಗಿಭಿರಪ್ಯಹರ್ನಿಶಮ್ ॥ ೧೬ ॥

ತ್ಯಜಿಸಲ್ಪಟ್ಟ ನಾನಾತರಹದ ಗುಣ–ಕರ್ಮ–ವ್ಯವಹಾರವುಳ್ಳ ಯೋಗಿಗಳಿಂದ ಹಗಲಿರುಳೂ ಶೋಭಿಸುತ್ತಿರುವ, ಹಗಲಿರುಳೂ ಚಿಂತಿಸಲ್ಪಟ್ಟ, ನಾನಾವಿಧಗುಣ–ಕರ್ಮ–ವ್ಯವಹಾರವುಳ್ಳ ವಿಲಾಸಿ ಜನರಿಂದ ಕೂಡಿದ (ಕುಟಜಾದ್ರಿಯನ್ನು ನೋಡಿದರು.)

ನಿರೀಕ್ಷ್ಯ ತೇ ತತ್ರ ಮನಃಪ್ರಸಾದನಂ ಜಗಜ್ಜನನ್ಯಾಃ ಸದನಂ ಮುದಾವಹಮ್ ।
ಪುರಃ ಕೃತಾರ್ಥೀಕೃತಸಾಧುಲೋಚನಂ ತ್ವಮನ್ಯತಾಮೀ ಜನುಷಃ ಕೃತಾರ್ಥತಾಮ್ ॥ ೧೭ ॥

ಅವರು ಆ ಪರ್ವತದಲ್ಲಿ ಮುಂಭಾಗದಲ್ಲಿರುವ, ಮನಸ್ಸನ್ನು ಪ್ರಸನ್ನಗೊಳಿಸುವ, ಮುದವನ್ನೀಯುವ, ಸಜ್ಜನರ ಕಣ್ಣುಗಳನ್ನು ಕೃತಾರ್ಥವನ್ನಾಗಿಸಿದ ಜಗದಂಬೆಯ ಮಂದಿರವನ್ನು ನೋಡಿ ತಮ್ಮ ಜನ್ಮವು ಸಾರ್ಥಕವಾಯಿತೆಂದು ಭಾವಿಸಿದರು.

ತದೀಕ್ಷಣೋತ್ಫುಲ್ಲವಿಲೋಚನೋತ್ಪಲಾ ವಿಲೋಲವಾಲಾಕುಲಿತೈರ್ವವಂದಿರೇ ।
ಜಗಚ್ಛರಣ್ಯಾಂ ಶರಣಾರ್ಥಮೀಶ್ವರೀಂ ಶಿರೋಭಿರಾನಂದಭರಾವನಾಮಿತೈಃ ॥ ೧೮ ॥

ದೇವಿಯ ದರ್ಶನದಿಂದ ಅರಳಿದ ನೈದಿಲೆಯಂತಾದ ಕಣ್ಣುಳ್ಳವರಾಗಿ, ರಕ್ಷಣೆಗೋಸ್ಕರ ಜಗದ್ರಕ್ಷಕಳಾದ ಪರಮೇಶ್ವರಿಯನ್ನು ಚಂಚಲವಾದ ಕೂದಲುಗಳಿಂದ ಕೂಡಿದ, ಸಾನಂದದಿಂದ ಬಾಗಿದ ಮಸ್ತಕಗಳಿಂದ ವಂದಿಸಿದರು.

ಪುರಾ ಪುರಾರೇರ್ನಯನಾನಲತ್ವಿಷಾ ಪ್ರಧೂಮಿತಂ ಲೋಕಮಿಮಂ ಸಿಸೃಕ್ಷಯಾ ।
ಸ್ವಯೇಚ್ಛಯೋಪಾತ್ತಸಮಸ್ತವಿಗ್ರಹಾಮಿಮಾಂ ಭವಾನೀಂ ಮನಸಾ ಭಜಾಮಹೇ ॥ ೧೯ ॥

ಹಿಂದೆ ಪರಮೇಶ್ವರನ ಕಣ್ಣಿನ ಜ್ವಾಲೆಯಿಂದ ಭಸ್ಮವಾಗಿದ್ದ ಈ ಲೋಕವನ್ನು ಸೃಷ್ಟಿಸಲೋಸುಗ ಸ್ವೇಚ್ಛೆಯಿಂದ ನಾನಾರೂಪಗಳನ್ನು ಪಡೆದಂತಹ ಈ ಭವಾನಿಯನ್ನು ಮನಸಾರೆ ಭಜಿಸುತ್ತೇವೆ.

ನಿಹತ್ಯ ಮೂಕಾಸುರಮುಗ್ರಪೌರುಷಂ ಸದಂಡಹುಂಡೋತ್ತಮಚಂಡಮಂಡಿತಮ್ ।
ಅಕಾರಿ ತಲ್ಲೋಕರಿರಕ್ಷಯಾ ಪುರಂ ತ್ವಯಾ ಪ್ರಧಾನಂ ಮನಸಾऽಭಿಲಿಪ್ಸಿತಮ್ ॥ ೨೦ ॥

ದಂಡವನ್ನು ಹಿಡಿದಿರುವ ರಾಕ್ಷಸಶ್ರೇಷ್ಠರ ಉಗ್ರತೆಯಿಂದ ಅಲಂಕೃತನಾದ, ಮಹಾಪರಾಕ್ರಮಿಯಾದ ಮೂಕಾಸುರನನ್ನು ಕೊಂದು ಲೋಕವನ್ನು ರಕ್ಷಿಸುವ ಇಚ್ಛೆಯಿಂದ ಮನಸಾರೆ ಇಷ್ಟಪಟ್ಟಂತಹ ಈ ಪುರವು ನಿನ್ನಿಂದ ಪ್ರಧಾನ ನಗರವಾಗಿ ಮಾಡಲ್ಪಟ್ಟಿತು.

ಇತಿ ಸ್ತುವಂತೋ ಜಗದಂಬಿಕಾಂ ಮುಹುಃ ಪ್ರಸನ್ನದೇವೀಕರುಣೇಕ್ಷಣಾऽದೃತಾಃ ।
ಅಹೋಭಿರೇವಂ ಪುರತೋऽಭಿನಿಃಸೃತಾಃ ಪ್ರಪೇದಿರೇ ಕೈಶ್ಚನ ಲಾವಣಾಜಿರಮ್ ॥ ೨೧ ॥

ಈ ರೀತಿಯಾಗಿ ಜಗದಂಬೆಯನ್ನು ಪುನಃ ಪುನಃ ಸ್ತುತಿಸುತ್ತಾ ಪ್ರಸನ್ನಳಾದ ದೇವಿಯ ಕರುಣಾಕಟಾಕ್ಷದಿಂದ ಅನುಗ್ರಹಿಸಲ್ಪಟ್ಟವರಾಗಿ ಮುಂದಕ್ಕೆ ಹೊರಟು ಕೆಲವು ದಿವಸಗಳಲ್ಲಿ ಉಪ್ಪಂಗಳವನ್ನು ತಲುಪಿದರು.

ಪದಂ ಧ್ರುವಂ ಸ್ವಂ ಸ್ವಜನೈಃ ಸಮೇಧಿತಂ ಕೃಪಾಕಟಾಕ್ಷೋಲ್ಲಸಿತಂ ಪರಾತ್ಮನಃ ।
ಸಮಾಯಯುಸ್ತೇ ತಪಸೋऽಗ್ರಿಮೇ ದಲೇ ತಿಥೌ ನವಮ್ಯಾಂ ವಿಧಿಭೇ ಶುಭಾನ್ವಿತೇ ॥ ೨೨ ॥

ಅವರು ಮಾಘಮಾಸದ ಮೊದಲನೇ (ಶುಕ್ಲ) ಪಕ್ಷದ, ಬ್ರಹ್ಮನ ನಕ್ಷತ್ರ (ರೋಹಿಣಿ) ಯುಕ್ತವಾದ, ನವಮಿಯ ಶುಭದಿನದಂದು ತಮ್ಮವರಿಂದ ಬೆಳೆಸಲ್ಪಟ್ಟ, ಪರಮಾತ್ಮನ ಕೃಪಾಕಟಾಕ್ಷದಿಂದ ಸಮಾಧಾನದಿಂದ ಕೂಡಿದ ತಮ್ಮ ಶಾಶ್ವತವಾದ ಸ್ಥಾನವನ್ನು ತಲುಪಿದರು.

ಇತಿ ಶ್ರುತ್ವೋದಂತಂ ಸಪದಿ ನಿಭೃತಾಽನಂದನಿವಹಾಃ
ಸಮೀಯುರ್ಗ್ರಾಮೀಣಾ ವಿವಿಧವಿಪುಲೋಪಾಯನಶಯಾಃ ।
ಸ ವಾರೋ ವೈ ತೇಷಾಂ ಸುತಜನನಕಾಲೋತ್ಸವಗುಣಃ
ಸಮಿಂಧಾನೋಽದ್ಯಾಪಿ ಪ್ರಥಿತಮಹಭೂಮಾ ವಿಜಯತೇ ॥ ೨೩ ॥

ಈ ರೀತಿಯಾದ ವೃತ್ತಾಂತವನ್ನು ಕೇಳಿ, ಕೂಡಲೇ ಅತ್ಯಂತ ಸಂತುಷ್ಟರಾದ ಗ್ರಾಮಸ್ಥರು ನಾನಾವಿಧವಾದ ಅನೇಕ ಉಡುಗೊರೆಗಳನ್ನು ಹಿಡಿದುಕೊಂಡು ಬಂದರು. ಗ್ರಾಮೀಣರ ಸಮೂಹದ ಪಾಲಿಗೆ ಮಗು ಜನಿಸಿದ ಕಾಲದಲ್ಲಿ (ತಂದೆಗೆ) ಆಗುವ ಸಂತೋಷದಂತೆ ದೇವಿಯ ಆಗಮನೋತ್ಸವದ ಆ ಸಂತೋಷವು ಇಂದಿಗೂ ಪ್ರವರ್ಧಮಾನವಾಗಿ ಸರ್ವೋತ್ಕೃಷ್ಟವೆನಿಸಿದೆ.

ವಿರಚಿತಪುರಯಾನೈರ್ಭೂಸುರೈಃ ಸಂವಿದಾನೈ-
ರ್ವಿಗಲಿತಬಹುಕೃತ್ಯಾಃ ಸಂಗತಾಸ್ತೋಷಮಾಪುಃ ।
ಜನಯತಿ ಜನತಾಯಾಃ ಬಾಢಮಾನಂದಕಂದಂ
ಲಲಿತಪದವಚೋಭಿಃ ಸಂಗಮಃ ಸಜ್ಜನಾನಾಮ್ ॥ ೨೪ ॥

ಅವರು ತಮ್ಮ ಅನೇಕ ಕೆಲಸಕಾರ್ಯಗಳನ್ನು ತೊರೆದು, ಊರಿಗೆ ಬಂದಂತಹ ಬ್ರಾಹ್ಮಣರೊಂದಿಗೆ ಸೇರಿ ಸಂತೋಷವನ್ನು ಹೊಂದಿದರು. ಸಜ್ಜನರ ಸಂಗಮವು ಮೃದುಮಧುರವಚನಗಳಿಂದ ಜನರಿಗೆ ಆನಂದವನ್ನು ಉಂಟುಮಾಡುತ್ತದೆ.

ಚತುರ್ಭ್ಯೋ ಗ್ರಾಮೇಭ್ಯೋ ವಿವಿಧಬಲಿಭೂಮಾನಮತುಲಂ
ಸುದಾಯಂ ದಾಯಾದಾಃ ಸತತಮುಪಜಹ್ರುರ್ಬಲಿಭೃತೇ ।
ಸವಾದಿತ್ರೈರ್ಘೋಷೈಃ ಶ್ರುತಿವಿಚಿತಿಭಾಜಾಂ ದ್ವಿಜನುಷಾಂ
ಸ ರೇಜೇ ಸಂಪೂರ್ಣಂ ಕ್ರಮಘನಜಟಾತಾನವಿತತೈಃ ॥ ೨೫ ॥

ಆ ದಾಯಾದಿಗಳು (ಒಂದೇ ಕುಟುಂಬದವರು) ನಾಲ್ಕು ಗ್ರಾಮಗಳಿಂದಲೂ, ಆಯಾ ಕಾಲದಲ್ಲಿ ಅನೇಕ ವಿಧವಾದ ಸುವಸ್ತುಗಳನ್ನು ರಾಜಮರ್ಯಾದೆಗೆ ಯೋಗ್ಯಳಾದ ಶ್ರೀದೇವಿಯ ಸನ್ನಿಧಿಗೆ ನಿರಂತರವಾಗಿ ನೀಡಿದರು. ವೇದಾಧ್ಯಯನಸಂಪನ್ನರಾದ ಬ್ರಾಹ್ಮಣರ ವಾದ್ಯಘೋಷಗಳಿಂದ, ಕ್ರಮ-ಘನ-ಜಟಾಧ್ವನಿಗಳಿಂದಲೂ ಆ ಪ್ರದೇಶವು ಶೋಭಿಸುತ್ತಿತ್ತು.

॥ ಇತ್ಯಗಲ್ಪಾಡಿಮಾಹಾತ್ಮ್ಯೇ ದ್ವಿತೀಯಃ ಸ್ತಬಕಃ ॥

ಇಲ್ಲಿಗೆ ಅಗಲ್ಪಾಡಿಮಹಾತ್ಮೆಯಲ್ಲಿ ಎರಡನೇ ಸ್ತಬಕವು ಮುಗಿಯಿತು.

॥ ಅಥ ತೃತೀಯಃ ಸ್ತಬಕಃ ॥

ವಿಗಲಿತಾ ಅಪಿ ತೇ ಪುನರಾಯಯುಃ ಸಪದಿ ಲಂಘಿತತುಂಗದಿಗಂತರಾಃ ।
ಗಿರಿಸುತಾಕರುಣಾಸ್ಪದತಾಮಗುರ್ವಿಘಟನೇ ಘಟನೇ ಚ ವಿಧಿಃ ಕ್ಷಮಃ ॥ ೧ ॥

ಅಗಲಿದವರಾದರೂ ಸಹ ಅವರು ದೀರ್ಘವಾದ ದಾರಿಯನ್ನು ದಾಟಿ ಪುನಃ ಹಿಂದಿರುಗಿದರು, ಗಿರಿಜೆಯ ಕೃಪಾಪಾತ್ರರಾದರು. ವಿಧಿಯು ಬೇರ್ಪಡಿಸಲೂ ಒಂದುಗೂಡಿಸಲೂ ಸಹ ಸಮರ್ಥವಾಗಿದೆ.

ಅಗಲನಂ ಗಲನೇನ ವಿನಾ ಕೃತಂ ತದನು ದೈಶಿಕಪಾಡಿಸಮಾಖ್ಯಿತಾ ।
ಭವತಿ ಸುಸ್ಥಿರದೇಶ ಇತೀಶ್ವರೀಪದಮಿದಂ ಬ್ರುವತೇಽಗಲಪಾಡಿನಾ ॥ ೨ ॥

ಅಗಲನವೆಂದರೆ ಅಗಲುವಿಕೆಯಿಂದ ಹೊರತಾದದ್ದು, ಹಾಗೂ ಗ್ರಾಮೀಣ ಶಬ್ದವಾದ ಪಾಡಿ (ಪ್ರದೇಶ) ಎಂಬ ಶಬ್ದವು ಸೇರಿ, ಸುಸ್ಥಿರವಾದ ದೇಶ ಎಂದರ್ಥವಾಗುತ್ತದೆ. ಹೀಗೆ ಈ ಈಶ್ವರಿಯ ಸ್ಥಾನವು ಅಗಲಪಾಡಿ (ಸ್ಥಿರವಾದ ಪ್ರದೇಶ) ಎಂದು ಕರೆಯಲ್ಪಡುತ್ತದೆ.

ನಿತ್ಯಾನಂದಪರಾಯಣಾ ಶ್ರುತಿಶಿಖಾಸೀಮಂತಚೂಡಾಮಣಿಃ
ಕಾರುಣ್ಯಾಪತರಂಗಿಣೀ ಹರಮನಃಸಂಕಲ್ಪಚಿಂತಾಮಣಿಃ ।
ಕಾರಾಷ್ಟ್ರದ್ವಿಜಭಾಗ್ಯವಾರಿಧಿಶರಚ್ಚಂದ್ರೋದಯಾ ಶಂಕರೀ
ಸಾಽಗಲ್ಪಾಡಿಧುರಂಧರಾ ವಿಜಯತೇ ದೇವ್ಯನ್ನಪೂರ್ಣೇಶ್ವರೀ ॥ ೩ ॥

ನಿತ್ಯಾನಂದರಾದ ಯೋಗಿಗಳಿಗೆ ಆಸರೆಯಾದ, ಶ್ರುತಿಶಿಖೆಯ (ವೇದಾಂತ) ಸೀಮಂತಕ್ಕೆ (ಬೈತಲೆಗೆ) ಚೂಡಾಮಣಿಯಂತಿರುವ, ಕರುಣೆಯೆಂಬ ಜಲದಿಂದ ಕೂಡಿದ ನದಿಯಂತಿರುವ, ಪರಮೇಶ್ವರನ ಮನಃಸಂಕಲ್ಪದ ಚಿಂತಾಮಣಿಯಾಗಿರುವ, ಕರ್ಹಾಡ ಬ್ರಾಹ್ಮಣರ ಭಾಗ್ಯವೆಂಬ ಸಾಗರದಿಂದುದಿಸಿದ ಶರದೃತುವಿನ ಚಂದ್ರನಂತಿರುವ, ಮಂಗಳಕರಳಾದ ಅಗಲ್ಪಾಡಿಯ ಅನ್ನಪೂರ್ಣೇಶ್ವರೀದೇವಿಯು ಉತ್ಕರ್ಷದಿಂದ ಶೋಭಿಸುತ್ತಿರುವಳು.

ನಿತ್ಯೇ ದುರ್ಲಭವಸ್ತುನಿ ಪ್ರಿಯತಮೇ ಹಸ್ತಾಂತರಾಲಸ್ಥಿತೇ
ಸೌಲಭ್ಯೇನ ಯದನ್ಯವಸ್ತುವಿಚಯಃ ಸಾ ಮೂಢತೈವ ಸ್ಫುಟಮ್ ।
ಕಾರಾಷ್ಟ್ರಪ್ರಿಯಬಾಂಧವಾ! ಮಮ ವಚಸ್ತತ್ ಸಂಪ್ರಿಯಂ ಶ್ರೂಯತಾಂ
ತದ್ದೇವೀಚರಣಾರವಿಂದಯುಗಲಂ ಪ್ರೀತ್ಯಾಽನ್ವಹಂ ಸೇವ್ಯತಾಮ್ ॥ ೪ ॥

ನಿತ್ಯವಾದ ಅತಿಪ್ರಿಯವಾದ ದುರ್ಲಭವಸ್ತುವು ಸುಲಭವಾಗಿ ಕೈಯೊಳಗಿರುವಾಗ ಬೇರೆಯ ವಸ್ತುವನ್ನು ಹುಡುಕುವುದು ಖಂಡಿತವಾಗಿಯೂ ಮೂರ್ಖತನವಾಗಿದೆ. ಹಾಗಾಗಿ ಹೇ ಪ್ರೀತಿಯ ಕರ್ಹಾಡ ಬಾಂಧವರೇ! ಹಿತಕರವಾದ ನನ್ನ ಮಾತನ್ನು ಕೇಳಿರಿ, ಪ್ರತಿದಿನವು ಸಂತೋಷದಿಂದ ಆ ದೇವಿಯ ಪಾದಾರವಿಂದಯುಗಲವನ್ನು ಪೂಜಿಸಿರಿ.

ಧೀರಾಃ! ಪಶ್ಯತ ಸರ್ವಲೋಕಜನನೀ ಭಕ್ತಾನುಕಂಪಿನ್ಯಸೌ
ಹಸ್ತಾಭ್ಯಾಂ ವರದಾಭಯೇ ಪ್ರತಿದಿನಂ ಮುದ್ರೇ ಬಿಭರ್ತ್ಯವ್ಯಯಾ ।
ತನ್ನಃ ಕಾಂಕ್ಷಿತಮರ್ಥಜಾತಮಖಿಲಂ ದಾಸ್ಯತ್ಯನೂನಂ ಶಿವಾ
ಮಿತ್ರಾಪತ್ಯಕಲತ್ರವಿತ್ತನಿಚಯಾನ್ ನಿರ್ವಾಣಮಪ್ಯನ್ವಹಮ್ ॥ ೫ ॥

ಎಲೈ ಪ್ರಾಜ್ಞರೇ! ನೋಡಿ, ಭಕ್ತಾನುಕಂಪೆಯಾದ ಸರ್ವಜನರಿಗೂ ತಾಯಿಯಾದ ಇವಳು ಪ್ರತಿದಿನವೂ ಎರಡು ಕೈಗಳಿಂದ ವರದ ಮತ್ತು ಅಭಯಮುದ್ರೆಗಳನ್ನು ಧರಿಸುತ್ತಾಳೆ. ಆದ್ದರಿಂದ ನಿಸ್ಸಂಶಯವಾಗಿ ಆ ಶಿವೆಯು ಯಾವಾಗಲೂ ನಾವು ಅಪೇಕ್ಷಿಸುವ ಸ್ನೇಹಿತರು–ಪತ್ನೀ–ಪುತ್ರ–ಸಂಪತ್ತುಗಳ ಸಮೂಹ ಮುಂತಾದ ಸಕಲೇಷ್ಟಾರ್ಥಗಳನ್ನೂ, ಮೋಕ್ಷವನ್ನೂ ಕರುಣಿಸುತ್ತಾಳೆ.

ಆಸ್ತಾಂ ತದ್ಗಣನಾ ಕಿಮತ್ರ ಬಹುಲೈರನ್ಯೋಪದೇಶೈರ್ವೃಥಾ
ಪಾಂಡಿತ್ಯಂ ವಿವೃಣೀಮಹೇ ಗಿರಿಸುತೇ! ಸ್ತಬ್ಧಾ ವಯಂ ತತ್ಕೃತೌ ।
ತ್ವತ್ಪಾದಾಬ್ಜಯುಗಾರ್ಚನಾ ತವ ಪದದ್ವಂದ್ವಸ್ಮೃತಿಸ್ತ್ವತ್ಪದೇ
ಶುಶ್ರೂಷಾಽಪಿ ಸದಾಽಸ್ತು ನೋ ದೃಢತರಾ ನಾನ್ಯದ್ವೃಣೀಮೋ ವಯಮ್ ॥ ೬ ॥

ಇಷ್ಟಾರ್ಥಗಳ ಗಣನೆಯು (ಲೆಕ್ಕಾಚಾರವು) ಅಲ್ಲಿರಲಿ. ನಿಷ್ಫಲವಾದ ಅನೇಕ ರೀತಿಯ ಪರೋಪದೇಶಗಳಿಂದ ಏನು ಪ್ರಯೋಜನ? ಕೇವಲ ಪಾಂಡಿತ್ಯವನ್ನು ಪ್ರದರ್ಶಿಸುವೆವಷ್ಟೇ, ಹೇ ಪಾರ್ವತಿಯೇ! ನಾವು ಆ ಕಾರ್ಯದಲ್ಲಿ ಸ್ತಬ್ಧರಾಗಿದ್ದೇವೆ. ನಿನ್ನೆರಡು ಪಾದಕಮಲಗಳ ಪೂಜೆಯ ಭಾಗ್ಯವೂ, ನಿನ್ನ ಪಾದಸ್ಮರಣೆಯೂ, ನಿನ್ನ ಚರಣಸೇವೆಯೂ ಸದಾ ನಮಗೆ ದೃಢವಾಗಿರಲಿ. ಬೇರೇನನ್ನೂ ನಾವು ಬೇಡೆವು.

ಕಲ್ಯಾಣಂ ಯದಿ ವಾಂಛಸಿ ಪ್ರಿಯತಮಂ ಕಲ್ಯಾಂಗರಾಗೋಜ್ವಲಾಂ
ಕಲ್ಯಾಣೀಂ ವ್ರಜ ಕಾಮಕಲ್ಪಲತಿಕಾಂ ಕಾರುಣ್ಯವಾರಾಂ ನಿಧಿಮ್ ।
ಯತ್ಪಾದಾಂಬುಜಪಂಜರೇ ಹರಿಹರಬ್ರಹ್ಮತ್ವಭೂತಿಪ್ರದಾ–
ಶ್ಚೇತೋ! ಜಾಗ್ರತಿ ಸಿದ್ಧಯೋ ಬಹುವಿಧಾಃ ಸುಸ್ನಿಗ್ಧಮಾಲೋಕಯ ॥ ೭ ॥

ಎಲೈ ಮನವೇ! ಅತಿಪ್ರಿಯವಾದ ಮಂಗಳವನ್ನು ಬಯಸುವಿಯಾದರೆ ಶುದ್ಧವಾದ ಅಂಗರಾಗಗಳಿಂದ ಶೋಭಿಸುವ, ಅಭಿಲಾಷೆಗಳ ಕಲ್ಪಲತೆಯಾದ, ಕರುಣಾಸಾಗರಳಾದ ದೇವಿಯನ್ನು ಆಶ್ರಯಿಸು. ಯಾವ ದೇವಿಯ ಪಾದಪದ್ಮವೆಂಬ ಪಂಜರದಲ್ಲಿ ಹರಿಹರಬ್ರಹ್ಮಪದವಿಗಳನ್ನೂ, ಅಣಿಮಾದ್ಯಷ್ಟೈಶ್ವರ್ಯಗಳನ್ನೂ ನೀಡುವ ಅನೇಕ ವಿಧವಾದ ಸಿದ್ಧಿಗಳು ಜಾಗೃತವಾಗಿವೆ. ಸ್ನೇಹಪೂರ್ವಕವಾಗಿ ನೋಡು.

ಭ್ರಾಂತ್ವಾ ದೇಶಮನಲ್ಪದುರ್ಗವಿಷಮಂ ತ್ವತ್ಪಾದಪದ್ಮಾಂತಿಕಂ
ಸಂಪ್ರಾಪ್ತಂ ಜಡಚಿತ್ತಮಾತ್ಮತನಯಸ್ವಾಂತೇನ ವೀಕ್ಷಸ್ವ ಮಾಮ್ ।
ಪಾಡೀಶಾನಿ! ಪರಾವರಾಖಿಲಜಗನ್ಮಾತರ್ನ ಚೈತಾವತಾ
ಕಾಽಪಿ ಸ್ಯಾತ್ ಕ್ಷತಿರಂಬ! ತೇಽಹಮಮುನಾ ಸ್ಯಾಂ ಧನ್ಯಧನ್ಯೋಽಧುನಾ ॥ ೮ ॥

ದುರ್ಗಮವಾದ ಅನೇಕ ದೇಶಗಳನ್ನು ಅಲೆದು ನಿನ್ನ ಚರಣಕಮಲದ ಬಳಿ ಬಂದಂತಹ ಮಂದಮತಿಯಾದ ನನ್ನನ್ನು ತನ್ನ ಮಗನೆಂಬ ಭಾವನೆಯಿಂದ ಈಕ್ಷಿಸು. ಉಚ್ಚ–ನೀಚರೂಪವಾದ ಸಕಲಜೀವಿಗಳ ಜನನಿಯಾದ ಹೇ ಅಗಲ್ಪಾಡೀಶ್ವರಿಯೇ! ತಾಯಿಯೇ! ಇಷ್ಟರಿಂದ ನಿನಗೆ ಯಾವುದೇ ತೊಂದರೆಯಾಗಲಾರದು, ಇದರಿಂದ ನಾನು ಈಗ ಪರಮಧನ್ಯನಾಗುವೆನು.

ದೇವಿ ತ್ವತ್ಪದಪಂಕಜದ್ವಯಮಿದಂ ಸಂಸಾರವಾರಾಂ ನಿಧೌ
ಮಗ್ನಾನಾಮವಲಂಬನಾಯ ಸುದೃಢಾ ಸರ್ವೋಪವಾಹಾ ತರಿಃ ।
ಆಪಜ್ಜಾಲಮಹಾರ್ಣವೇ ನಿರಯನಂ ಮಗ್ನಸ್ಯ ಭುಗ್ನಸ್ಯ ಮೇ
ಸೈವಾಽಲಂಬನಮಸ್ತು ವಿಶ್ವಜನನಿ! ತ್ವನ್ನಾವಿಕಾ ಸರ್ವದಾ ॥ ೯ ॥

ದೇವಿಯೇ! ನಿನ್ನ ಈ ಪಾದಪದ್ಮದ್ವಯವು ಸಂಸಾರಸಾಗರದಲ್ಲಿ ಮುಳುಗಿದ ಜನರಿಗೆ ಅವಲಂಬನೆಗಾಗಿರುವ ದೃಢವಾದ ಸರ್ವವಾಹಕವಾದ ನೌಕೆಯಾಗಿದೆ. ಹೇ ಜಗಜ್ಜನನಿಯೇ! ಆಪತ್ತಿನ ಸಮೂಹವೆಂಬ ಮಹಾಸಾಗರದಲ್ಲಿ ದಾರಿಕಾಣದೆ ಮುಳುಗಿ ಕಂಗೆಟ್ಟಿರುವ ನನಗೆ ಯಾವಾಗಲೂ ಆ ನಿನ್ನ ಚರಣನೌಕೆಯೇ ಆಶ್ರಯವಾಗಿರಲಿ.

ತ್ವತ್ಪಾರ್ಶ್ವೇ ವಸತಾಂ ತ್ವದನ್ನಮಮಲಂ ಸಂಭುಂಜತಾಂ ತ್ವತ್ಪದ–
ದ್ವಂದ್ವಕ್ಷಾಲನವಾರ್ಸುಧಾಂ ಚ ಧಯತಾಂ ತ್ವನ್ನಾಮ ಸಂಧ್ಯಾಯತಾಮ್ ।
ತ್ವನ್ಮೂರ್ತಿಂ ಸ್ವದೃಶಾ ಸಮಾಕಲಯತಾಂ ತ್ವತ್ಪುಷ್ಪಮಾಜಿಘ್ರತಾಂ
ಪುಣ್ಯೋಘ್ರಾಯಮನಂಗವೈರಿದಯಿತೇ! ಕಿಂ ವರ್ಣಯಾಮೋ ವಯಮ್ ॥ ೧೦ ॥

ಹೇ ಕಾಮವೈರಿಯ (ಈಶ್ವರನ) ಪತ್ನಿಯೇ! ನಿನ್ನ ಸಮೀಪದಲ್ಲಿ ವಾಸಿಸುವವರ, ನಿನ್ನ ಪವಿತ್ರವಾದ ಅನ್ನಪ್ರಸಾದವನ್ನು ಸೇವಿಸುವವರ, ನಿನ್ನ ಚರಣದ್ವಂದ್ವವನ್ನು ಪ್ರಕ್ಷಾಲಿಸಿದ ತೀರ್ಥಾಮೃತವನ್ನು ಪ್ರಾಶನಮಾಡುವವರ, ನಿನ್ನ ನಾಮವನ್ನು ಧ್ಯಾನಿಸುವವರ, ನಿನ್ನ ಮೂರ್ತಿಯನ್ನು ತಮ್ಮ ಕಣ್ಣುಗಳಿಂದ ಸಾಕ್ಷಾತ್ಕರಿಸಿಕೊಳ್ಳುವವರ, ನಿನ್ನ ಪುಷ್ಪವನ್ನು ಆಘ್ರಾಣಿಸುವಂತಹವರ ಪುಣ್ಯದ ಔನ್ನತ್ಯವನ್ನು ನಾವು ಏನೆಂದು ವರ್ಣಿಸೋಣ?

ತ್ವತ್ಪಾದಾಗ್ರಮಿದಂ ಕಿಮಿಂದುಶಕಲೈರುತ್ತಂಸಿತಂ ಶಂಭುನಾ
ಚಂದ್ರಾರ್ಧೋಜ್ವಲಶೇಖರೇಣ ದಯಿತೇ! ಚಂದ್ರಾರ್ಧಚೂಡಾಮಣೇಃ ।
ಯತ್ಪಾದಾಗ್ರನಿರೀಕ್ಷಣಂ ಸುಕೃತಿನಾಂ ಕಾಂತೀಂದುಕಾಂತೋಪಲಂ
ನೂನಂ ದ್ರಾವಯತೀಹ ಶೈಲತನಯೇ! ಕಿಂ ಸ್ಯಾದಿದಂ ಪ್ರತ್ಯುತ ॥ ೧೧ ॥

ಎಲೈ ಚಂದ್ರಶೇಖರನ ಮಡದಿಯೇ! ಈ ನಿನ್ನ ಮುಂಗಾಲು ಅರ್ಧಚಂದ್ರರೂಪದ ಉಜ್ವಲ ಶಿರೋಭೂಷಣವುಳ್ಳ ಶಿವನಿಂದ ಚಂದ್ರನ ಖಂಡಗಳಿಂದ ಶೃಂಗರಿಸಲ್ಪಟ್ಟಿದೆಯೇನು? ಯಾವ ಮುಂಗಾಲಿನ ದರ್ಶನವು ಪುಣ್ಯವಂತರ ಆಸೆಯೆಂಬ ಚಂದ್ರಕಾಂತಶಿಲೆಯನ್ನು ನಿಶ್ಚಿತವಾಗಿ ಕರಗಿಸುತ್ತದೆ. ಹಾಗಿದ್ದರೆ ಹೇ ಪರ್ವತಪುತ್ರಿಯೇ! ಇದು (ನಿನ್ನ ಕಾಲಿನ ಅಲಂಕಾರವು) ಬೇರೇನಾಗಿರಲು ಸಾಧ್ಯ?

ತ್ವತ್ಪಾದಾಬ್ಜನಖೇಂದುಕಾಂತ್ಯರುಣಿಮಾಂಭೋಧೌ ನಿಮಗ್ನಂ ಜಗ-
ಜ್ಜಾಲಂ ವಿಶ್ವಸೃಡಾಜ್ಞಯಾ ರಚಯತೀಶಾನಃ ಪರಂ ಲುಂಪತಿ ।
ವಿಷ್ಣುಃ ಪಾಲಯತೀದಮೇವಮನಿಶಂ ಬ್ರಹ್ಮಾದಯೋಽಪ್ಯಾತ್ಮನಾ
ತ್ವಚ್ಛಾಸ್ತಿಪ್ರತಿವಾಹಕಾಃ ಕಿಮಪರೇ ನಾಕೇಶಪಾಶ್ಯಾದಯಃ ॥ ೧೨ ॥

ನಿನ್ನ ಪಾದಪದ್ಮದ ನಖರೂಪವಾದ ಚಂದ್ರನ ನಸುಕೆಂಪಾದ ಕಾಂತಿಯೆಂಬ ಸಮುದ್ರದಲ್ಲಿ ಮುಳುಗಿರುವ ಜಗತ್ಸಮೂಹವನ್ನು ಬ್ರಹ್ಮನು ನಿನ್ನ ಆಜ್ಞೆಯಿಂದ ಸೃಷ್ಟಿಸುತ್ತಾನೆ, ಈಶ್ವರನು ಲಯಗೊಳಿಸುತ್ತಾನೆ, ಹಾಗೆಯೇ ವಿಷ್ಣುವು ಇದನ್ನು ಯಾವಾಗಲೂ ಪಾಲಿಸುತ್ತಾನೆ. ಹೀಗೆ ಸ್ವತಃ ಬ್ರಹ್ಮಾದಿಗಳೂ ಕೂಡ ನಿನ್ನ ಆಜ್ಞಾಪಾಲಕರಾಗಿದ್ದಾರೆ. ಬೇರೆಯ ಇಂದ್ರ-ವರುಣಾದಿಗಳಿನ್ನೇನು?

ಪಾದಾಗ್ರಂ ನವಕುಂಕುಮಾರುಣಮಿದಂ ಸ್ರಗ್ಗಂಧಧೂಪಾರ್ಚಿತಂ
ಕಾಮಾರಾತಿಹೃದಬ್ಜಕೋಶನಿಲಯಂ ಭಕ್ತೇಷ್ಟಸಿದ್ಧಿಪ್ರದಮ್ ।
ದೇವಸ್ತ್ರೀಕರಕಂಜಸಂಪುಟಲಸತ್ತ್ವದ್ಮೋಪಚರ್ಯಂ ಶಿವೇ!
ಧ್ಯಾಯಾಮೋ ವಯಮೀಪ್ಸಿತಾರ್ಥಫಲಸಂಪ್ರಾಪ್ತ್ಯೈ ಪುರಾಣೇಶ್ವರಿ ॥ ೧೩ ॥

ಶಿವೆಯೇ! ಹೊಸದಾದ ಕುಂಕುಮದಿಂದ ಕೆಂಪಾದ, ಮಾಲೆ-ಗಂಧ-ಧೂಪಗಳಿಂದ ಅರ್ಚಿಸಲ್ಪಟ್ಟ ಕಾಮವೈರಿಯಾದ ಪರಮೇಶ್ವರನ ಹೃದಯಪದ್ಮದಲ್ಲಿ ನೆಲೆಸಿರುವ, ಭಕ್ತರ ಇಷ್ಟಾರ್ಥವನ್ನೀಯುವ, ದೇವತಾಸ್ತ್ರೀಯರ ಕರಕಮಲಾಂಜಲಿಯಲ್ಲಿ ಶೋಭಿಸುವ ಪದ್ಮಗಳಿಂದ ಪೂಜಿಸಲ್ಪಡುವ ಈ ನಿನ್ನ ಚರಣವನ್ನು ಹೇ ಆದಿಮಾಯೆಯೇ! ನಾವು ಇಷ್ಟಾರ್ಥಫಲಸಿದ್ಧಿಗಾಗಿ ಧ್ಯಾನಿಸುತ್ತೇವೆ.

ನಿದ್ರಾಣೇ ಜಲಧೌ ಯುಗಾಂತಲುಲಿತೇ ವಿಷ್ಣೌ ವಿರಂಚೌ ಹರೇ-
ರ್ನಾಭ್ಯಂಭೋಜಗತೇ ಚ ದಾನವವರೌ ಜಾತೌ ಮಧುಃ ಕೈಟಭಃ ।
ಆತ್ಮಾನಂ ಗಿಲಿತುಂ ಸಮಾಗತವತಾವುದ್ವೀಕ್ಷ್ಯ ತೌ ಬ್ರಹ್ಮಣಾ
ಭೀತೇನಾಥ ಪರಿಷ್ಕೃತಾ ತ್ವಮಭವಃ ಕಾಲೀ ಕರಾಲಾನನಾ ॥ ೧೪ ॥

ಯುಗಾಂತ್ಯಕಾಲದಲ್ಲಿ ಕಲಕಲ್ಪಟ್ಟ ಸಮುದ್ರದಲ್ಲಿ ವಿಷ್ಣುವು ಯೋಗನಿದ್ರೆಯಲ್ಲಿರಲು, ಬ್ರಹ್ಮನು ವಿಷ್ಣುವಿನ ನಾಭಿಕಮಲದಲ್ಲಿರಲು, ಮಧು-ಕೈಟಭರೆಂಬ ಇಬ್ಬರು ಮಹಾದೈತ್ಯರು ಜನಿಸಿದರು. ತನ್ನನ್ನು ನುಂಗಲು ಬರುತ್ತಿರುವ ಅವರನ್ನು ನೋಡಿ ಭಯಗೊಂಡ ಬ್ರಹ್ಮನಿಂದ ಭಯಂಕರವಾದ ಮುಖವುಳ್ಳ ಕಾಳಿಯಾದ ನೀನು ಸ್ತುತಿಸಲ್ಪಟ್ಟಿರುವಿ.

ಉತ್ಥಾಯಾಥ ನಿರೀಕ್ಷ್ಯ ತೌ ಸಮಬಲೌ ತಾಭ್ಯಾಂ ಬಲಿಭ್ಯಾಂ ಬಲೀ
ಬಾಹುಭ್ಯಾಂ ಯುಯುಧೇ ಸಮಾಃ ಶರಮಿತಾಃ ಸಾಹಸ್ರಕೀರ್ವಾ ವಿಭುಃ ।
ತುಷ್ಟೇನ ವ್ರಿಯತಾಂ ವರೋಽಸುರವರಾವಿತ್ಯೂಚುಷಾ ವಿಷ್ಣುನಾ
ಜಘ್ನಾತೇ ಜಘನೇ ವಿಧಾಯ ಶಿರಸೀ ಛಿತ್ವಾಽರಿಣೇಷ್ಟಪ್ರದೌ ॥ ೧೫ ॥

ನಂತರ ಯೋಗನಿದ್ರೆಯಿಂದೆದ್ದು ಸರ್ವವ್ಯಾಪಿಯೂ ಬಲಶಾಲಿಯೂ ಆದ ವಿಷ್ಣುವು ತನಗೆ ಸಮಬಲರಾದ ಅವರಿಬ್ಬರನ್ನು ನೋಡಿ ಪರಾಕ್ರಮಿಗಳಾದ ಅವರೊಡನೆ ಐದುಸಾವಿರವರ್ಷಗಳ ಕಾಲ ಬಾಹುಯುದ್ಧವನ್ನು ಮಾಡಿದನು. ಅನಂತರ ಸಂತುಷ್ಟನಾದ ವಿಷ್ಣುವಿನಿಂದ "ಅಸುರಶ್ರೇಷ್ಠರೇ! ವರವನ್ನು ಕೇಳಿರಿ" ಎಂದು ಹೇಳಲ್ಪಟ್ಟಾಗ, ಅವರೇ ಇಷ್ಟಾರ್ಥವನ್ನು ನೀಡಲು ಮುಂದಾಗಿ ವಿಷ್ಣುವಿನ ಮಡಿಲಲ್ಲಿ ತಲೆಯಿರಿಸಿ ಚಕ್ರದಿಂದ ಸಂಹರಿಸಲ್ಪಟ್ಟರು.

ಆಕ್ರಾಂತೇ ತ್ರಿದಿವೇ ಲುಲಾಯವಪುಷಾ ನಿಷ್ಕ್ರಾಂತದೇವಾತ್ಮಭೂ-
ಸಂಪ್ರಾಪ್ತಾಖಿಲವೃತ್ತಜಾತಕುಪಿತಶ್ರೀಶೇಶದೇವಾಂಗತಃ ।
ಪ್ರಾದುರ್ಭೂತಮಹಾವಿಕಾಸವಿಶದಂ ತೇಜಃ ಪರಂ ಬಿಭ್ರತೀ
ಲಕ್ಷ್ಮೀಃ ಪ್ರಾದುರಭೂದ್ದಶಾಷ್ಟಭುಜಸಂಘೃಷ್ಟಾಷ್ಟಕಾಷ್ಠಾಂತರಾ ॥ ೧೬ ॥

ಒಮ್ಮೆ ಸ್ವರ್ಗವು ಕೋಣನ ಸ್ವರೂಪವುಳ್ಳ ರಾಕ್ಷಸ (ಮಹಿಷಾಸುರ) ನಿಂದ ಆಕ್ರಮಿಸಲ್ಪಡಲು ಸ್ವರ್ಗದಿಂದ ಹೊರಹಾಕಲ್ಪಟ್ಟ ದೇವತೆಗಳು ಮತ್ತು ಬ್ರಹ್ಮನಿಂದ ತಿಳಿಯಲ್ಪಟ್ಟ ಸಕಲವೃತ್ತಾಂತವುಳ್ಳ ವಿಷ್ಣು, ಶಿವ, ಮತ್ತು ದೇವತೆಗಳ ಶರೀರದಿಂದ ಆವಿರ್ಭವಿಸಿದ ಸರ್ವವ್ಯಾಪಿ ದಿವ್ಯತೇಜಸ್ಸನ್ನು ಹೊಂದಿದವಳಾಗಿ ಹದಿನೆಂಟು ಭುಜಗಳಿಂದ ಅಷ್ಟದಿಗಂತಗಳನ್ನಾವರಿಸಿ ಲಕ್ಷ್ಮಿಯು ಪ್ರಾದುರ್ಭೂತಳಾದಳು.

ಲಬ್ಧಾಸ್ತ್ರಾ ದೇವತಾಭ್ಯಃ ಸುರಗಣವಿನುತಾ ವಿಕ್ರಮಾಕ್ರಾಂತದೈತ್ಯಾ–
ನೀಕಾಲಿಃ ಸಿಂಹನಾದಸ್ಫುಟಿತರಿಪುಹೃದುತ್ಕ್ರಾಂತವಾಯುಪ್ರವಾಹಾ ।
ಕ್ಷಿಪ್ರಾಸ್ತ್ರೈರ್ಬಾಹುದಂಡೈರ್ನಿಶಿತಶರಶತೈರ್ದುರ್ಧರಂ ದುರ್ಮುಖಂ ಚ
ವ್ಯಾಹಿಂಸೀರಾತ್ತಶಸ್ತ್ರಾನಸಿತನುರುಹಕಂ ಚಿಕ್ಷುರಂ ಬಾಷ್ಕಲಂ ಚ ॥ ೧೭ ॥

ದೇವತೆಗಳಿಂದ ಅಸ್ತ್ರಗಳನ್ನು ಪಡೆದವಳಾಗಿ, ಸುರವೃಂದದಿಂದ ಸ್ತುತಿಸಲ್ಪಟ್ಟವಳಾಗಿ, ಪರಾಕ್ರಮದಿಂದ ರಾಕ್ಷಸಸೇನಾಸಮೂಹವನ್ನು ಆಕ್ರಮಿಸಿ, ಸಿಂಹನಾದದಿಂದ ಒಡೆದಂತಹ ಶತ್ರುಹೃದಯದಿಂದ ಪ್ರಾಣವಾಯುಪ್ರವಾಹವನ್ನು ಮೇಲಕ್ಕೆ ಹಾರಿಸಿ, ಅತಿವೇಗವಾದ ಅಸ್ತ್ರಗಳುಳ್ಳ ಭುಜದಂಡಗಳಿಂದಲೂ ತೀಕ್ಷ್ಣವಾದ ನೂರಾರು ಬಾಣಗಳಿಂದಲೂ ಶಸ್ತ್ರಧಾರಿಗಳಾದ ದುರ್ಧರನನ್ನೂ, ದುರ್ಮುಖನನ್ನೂ, ಅಸಿಲೋಮನನ್ನೂ, ಚಿಕ್ಷುರನನ್ನೂ, ಬಾಷ್ಕಲನನ್ನೂ ಸಂಹರಿಸಿರುವಿ.

ಉಗ್ರಾಸ್ಯಂ ಚೋಗ್ರವೀರ್ಯಂ ತದನು ರಣರಸಾಯಾಂ ಚ ತಾಮ್ರಂ ತಥಾಽಂಧಂ
ಮಾರ್ಜಾರಂ ಬಾಣಜಾಲೈರ್ಜಲಧರನಿನದಂ ಪಾತಯಾಮಾಸಿಥ ತ್ವಮ್ ।
ಸಿಂಹಃ ಶುಂಡಾಲಕುಂಭಸ್ಥಿತಮಮರರಿಪುಂ ಚಾಮರಂ ಬಾಹುವೇಗೈ-
ರೇವಂ ಸಂಕ್ಷೀಯಮಾಣೇ ದ್ರುತಮುಪಗತವಾನ್ ಸೈರಿಭೋ ವಿಗ್ರಹಾಯ ॥ ೧೮ ॥

ಅನಂತರ ಯುದ್ಧಭೂಮಿಯಲ್ಲಿ ಉಗ್ರಾಸ್ಯನನ್ನೂ, ಉಗ್ರವೀರ್ಯನನ್ನೂ, ತಾಮ್ರನನ್ನೂ, ಅಂಧನನ್ನೂ, ಮೇಘದಂತೆ ಗುಡುಗುವ ಮಾರ್ಜಾರನನ್ನೂ ಬಾಣಸಮೂಹಗಳಿಂದ ಕೆಡಹಿರುವಿ. ಸಿಂಹವು ಆನೆಯ ಕುಂಭಸ್ಥಳದಲ್ಲಿದ್ದ ಚಾಮರಾಸುರನನ್ನು ವೇಗವಾದ ಬಾಹುಪ್ರಹಾರದಿಂದ ಕೊಂದಿತು. ಹೀಗೆ ರಾಕ್ಷಸಸೈನ್ಯವು ಕ್ಷೀಣಿಸಲು ಮಹಿಷಾಸುರನು ಥಟ್ಟನೆ ಯುದ್ಧಕ್ಕೆ ಬಂದನು.

ನಿಃಶ್ವಾಸೋದ್ಭೂತಭೂತಪ್ರಮಥಗಣಬಲೈಃ ಸಂಹೃತಾಶೇಷಸೈನ್ಯೋ
ದೈತ್ಯಃ ಕಾಲಾರಿಕಂಠಪ್ರಸೃಮರರುಚಿನಾ ವರ್ಷ್ಮಣಾ ಸೈರಿಭೇಯಃ ।
ರುಂಧನ್ನಧ್ವಾನಮುಚ್ಚೈರ್ಭ್ರುಕುಟಿಕುಟಿಸಮಾಸೃಷ್ಟಭಾಲಾಂತರಾಲೋ
ಭೂಯೋ ಜಜ್ವಾಲ ದೇವಿ! ಜ್ವಲನ ಇವ ಸಮಾಶ್ಲಿಷ್ಟಕಾಷ್ಠಪ್ರಪಂಚಃ ॥ ೧೯ ॥

ನಿಟ್ಟುಸಿರಿನಿಂದ ಹುಟ್ಟಿದ ಭೂತಗಣಸೈನ್ಯದಿಂದ ಸಂಹರಿಸಲ್ಪಟ್ಟ ಸಕಲ ಸೇನೆಯುಳ್ಳ ಮಹಿಷೀಸುತನಾದ ದೈತ್ಯನು, ಈಶ್ವರನ ಕಂಠದಂತೆ ಪಸರಿಸುವ ಕಪ್ಪಾದ ಕಾಂತಿಯುಳ್ಳ ಶರೀರದಿಂದ ದೇವಿಯ ಮಾರ್ಗವನ್ನು ತಡೆದು, ಕೋಪದಿಂದ ಬಹಳ ವಕ್ರವಾಗಿಸಲ್ಪಟ್ಟ ಹುಬ್ಬುಗಂಟಿನಿಂದ ಕೆಳಗೆಳೆಯಲ್ಪಟ್ಟ ಹಣೆಮಧ್ಯವುಳ್ಳವನಾಗಿ, ಹೇ ದೇವಿಯೇ! ಕಟ್ಟಿಗೆರಾಶಿಗೆ ಹಬ್ಬಿರುವ ಬೆಂಕಿಯಂತೆ ಪುನಃ ಬಹಳ ಪ್ರಜ್ವಲಿಸಿದನು (ಮೆರೆದನು).

ಲೌಲಾಯಂ ಮಾರ್ತ್ಯಮೈಭಂ ವಪುರತಿವಿಪುಲಂ ಚಾಽಜಿರಂಗೇ ಸೃಜಂತಂ
ಪಾದೇನಾಽಕ್ರಮ್ಯ ಕಂಠೇ ಪಶುಪತಿದಯಿತೇ! ಪ್ರಸ್ಫುರಂತಂ ಸುರಾರಿಮ್ ।
ಛಿತ್ವಾ ಮೂರ್ಧಾನಮಾರಾದಗಲಪುರಮಹೇಶಾನಿ! ಶೂಲೇನ ವಕ್ಷೋ
ನಿರ್ಭಿದ್ಯೈನಂ ಜಘಂಥ ಸ್ಫುಟತರರಟಿತಂ ಸಾಮಿನಿಷ್ಕ್ರಾಂತಮವ್ಯಾತ್ ॥ ೨೦ ॥

ಹೇ ಅಗಲ್ಪಾಡಿಪುರದ ಮಹೇಶ್ವರಿಯೇ! ಯುದ್ಧಾಂಗಣದಲ್ಲಿ ಅತಿ ದೊಡ್ಡದಾದ ಕೋಣನ ರೂಪವನ್ನೂ, ಮನುಷ್ಯಾಕೃತಿಯನ್ನೂ, ಆನೆಯ ಸ್ವರೂಪವನ್ನು ತಳೆಯುತ್ತಿರುವ ಕೋಪದಿಂದ ಕಂಪಿಸುತ್ತಿರುವ ದೈತ್ಯನ ಕತ್ತನ್ನು ಕಾಲಿನಿಂದ ಮೆಟ್ಟಿ ತಲೆಯನ್ನು ಕತ್ತರಿಸಿ, ತ್ರಿಶೂಲದಿಂದ ಎದೆಯನ್ನು ಸೀಳಿ ಸಂಹರಿಸಿರುವಿಯಂತೆ. ಆಗ ಸ್ಫುಟವಾಗಿ ಹೊರಹೊಮ್ಮಿ ಅರ್ಧದಲ್ಲಿಯೇ ನಿಂತುಹೋದ ಆ ಅಸುರನ ಆರ್ತನಾದವು (ಇದಕ್ಕೆ ಕಾರಣೀಭೂತಳಾದ ಜಗನ್ಮಾತೆಯು ನಮ್ಮನ್ನು) ಕಾಪಾಡಲಿ.

ಪೂರ್ವಂ ಶುಂಭನಿಶುಂಭದೈತ್ಯಮೃದಿತಾಸ್ತ್ರೈವಿಷ್ಟಪಾಸ್ತ್ವಾಂ ಶಿವೇ!
ಧ್ಯಾಯಂತಸ್ತುಹಿನಾಚಲೇ ಸಮಸಚಂಸ್ತ್ವಂ ಪ್ರಾದುರಾಸೀಸ್ತತಃ ।
ಚಂದ್ರಾರ್ಧೋಜ್ವಲಶೇಖರಾಂ ತ್ರಿನಯನಾಂ ಶೀತಾಂಶುತುಲ್ಯಪ್ರಭಾಂ
ಸಂಪೃಕ್ತಾಷ್ಟಭುಜಾಂ ಮಹೇಶ್ವರಿ! ತನುಂ ಗೌರ್ಯಂಗಜಾಂ ಬಿಭ್ರತೀ ॥ ೨೧ ॥

ಹಿಂದೊಮ್ಮೆ ಶುಂಭ–ನಿಶುಂಭರೆಂಬ ರಾಕ್ಷಸರಿಂದ ಪೀಡಿಸಲ್ಪಟ್ಟ ದೇವತೆಗಳು ನಿನ್ನನ್ನು ಧ್ಯಾನಿಸುತ್ತಾ ಹಿಮಾಲಯದಲ್ಲಿ ಸೇರಿದರು. ನಂತರ, ಹೇ ಮಹೇಶ್ವರಿಯೇ! ನೀನು ಅರ್ಧಚಂದ್ರರೂಪದ ಉಜ್ವಲ ಶಿರೋಭೂಷಣವುಳ್ಳ, ಮೂರುಕಣ್ಣುಗಳುಳ್ಳ, ಚಂದ್ರಸಮಾನಕಾಂತಿಯುಳ್ಳ, ಎಂಟು ಭುಜಗಳಿಂದ ಕೂಡಿದ, ಗೌರೀದೇಹದಿಂದುದಿಸಿದ ಶರೀರವನ್ನು ಧರಿಸಿದವಳಾಗಿ ಪ್ರಾದುರ್ಭವಿಸಿದೆ.

ಶ್ರುತ್ವಾ ತ್ವಾಂ ಚಂಡಮುಂಡಾಸುರವರಗದಿತಾಂ ಶಾರದೇಂದೀವರಾಕ್ಷೀಂ
ಶುಂಭಃ ಪಂಚೇಷುಬಾಣಪ್ರತಿಹತಹೃದಯಃ ಪ್ರಾಹಿಣೋದ್ದೇವಿ! ದೂತಮ್ ।
ಸುಗ್ರೀವಂ ನಾಮ, ತಸ್ಮಿನ್ ಸಮಿತಿ ಚ ನಿಹತೇ ಕಾಮಧೂಮಾವಿಲಾಕ್ಷೋ
ಧೂಮ್ರಾಕ್ಷಂ ನಾಮ ದೈತ್ಯಂ ಜನನಿ! ತವ ಕೃತೇ ಪ್ರಾಹಿಣೋದ್ವಾಹಿನೀಶಮ್ ॥ ೨೨ ॥

ದೇವಿಯೆ! ಹೊಸದಾದ ಕನ್ನೈದಿಲೆಯಕಣ್ಣುಳ್ಳ ನಿನ್ನ ವಿಚಾರವನ್ನು ಚಂಡ–ಮುಂಡರಿಂದ ತಿಳಿದ ಶುಂಭನು ಮನ್ಮಥಬಾಣದಿಂದ ಹೊಡೆಯಲ್ಪಟ್ಟ ಹೃದಯವುಳ್ಳವನಾಗಿ ಸುಗ್ರೀವನೆಂಬ ದೂತನನ್ನು ಕಳುಹಿಸಿದನು. ತಾಯೇ! ಅವನು ಯುದ್ಧದಲ್ಲಿ ಕೊಲ್ಲಲ್ಪಡುತ್ತಿರಲು ಕಾಮದಿಂದ ಕೆಂಪಾದ ಕಣ್ಣುಳ್ಳವನಾಗಿ ಸೇನಾಧಿಪತಿಯಾದ ಧೂಮ್ರಾಕ್ಷನೆಂಬ ದೈತ್ಯನನ್ನು ನಿನ್ನನ್ನು ಬಂಧಿಸಲೋಸುಗ ಕಳುಹಿಸಿದನು.

ದೈತ್ಯಂ ಧೂಮ್ರಾಕ್ಷಮಾಜೌ ಪ್ರಸಭಮುಪಸೃತೌ ಚಂಡಮುಂಡೌ ಚ ಹತ್ವಾ
ರಕ್ತಾಕ್ಷಂ ರಕ್ತಬೀಜಂ ತದನು ದನುವರೌ ಶುಂಭತದ್ಭ್ರಾತರೌ ಚ ।
ಲೋಕಾನೇತಾನಶೇಷಾನ್ ಮುರರಿಪುಸಹಜೇಽಪೀಪಲಃ ಪ್ರೇಮದೃಷ್ಟ್ಯಾ
ಪಶ್ಯಾಸ್ಮಾನ್ ಶೈಲಕನ್ಯೇ! ತವ ದುರಿತಹರೇ ಪಾದಪದ್ಮೇ ಪ್ರಣಮ್ರಾನ್ ॥ ೨೩ ॥

ಹೇ ವಿಷ್ಣುಸಹೋದರಿಯೇ! ಯುದ್ಧದಲ್ಲಿ ದೈತ್ಯನಾದ ಧೂಮ್ರಾಕ್ಷನನ್ನೂ, ಹಠಾತ್ತನೆ ಆಕ್ರಮಿಸಿದ ಚಂಡಮುಂಡರನ್ನೂ, ರಕ್ತಾಕ್ಷನನ್ನೂ, ರಕ್ತಬೀಜನನ್ನೂ, ನಂತರ ರಾಕ್ಷಸಪ್ರಮುಖರಾದ ಶುಂಭನನ್ನೂ ಅವನ ಸಹೋದರನನ್ನೂ ಕೊಂದು ಈ ಸಕಲಲೋಕಗಳನ್ನೂ ಪಾಲಿಸಿದೆ. ಹೇ ಶೈಲಪುತ್ರಿಯೇ! ಪಾಪವಿನಾಶಕವಾದ ನಿನ್ನ ಪಾದಪದ್ಮದಲ್ಲಿ ಪ್ರಣಮಿಸುತ್ತಿರುವ ನಮ್ಮನ್ನು ಪ್ರೇಮದೃಷ್ಟಿಯಿಂದ ನೋಡು.

ವಿಷ್ಣೋಸ್ತ್ವಂ ದೇವಿ! ಲಕ್ಷ್ಮೀಃ ಪ್ರಣಯಸಹಚರೀ ಶರ್ವಸರ್ವಸ್ವಪಾತ್ರಂ
ಶರ್ವಾಣೀ ತ್ವಂ ತ್ವಮೇವಾಂಬುಜನಿಲಯಸಖೀ ಭಾರತೀ ಭೂರಿವಿದ್ಯಾ ।
ತ್ವಾಮಾಹುಃ ಸರ್ವಬೀಜಪ್ರಕೃತಿರಿತಿ ಪರಬ್ರಹ್ಮಣೋ ಮೂಲಶಕ್ತಿ–
ಸ್ತ್ವಂ ವೈ ಸರ್ವಂ ಪ್ರಸೂಷೇ ನಿಯಮಯಸಿ ವರೇ! ದೇವಿ! ಸರ್ವಂ ತ್ವಮೇವ ॥ ೨೪ ॥

ದೇವಿಯೇ! ನೀನು ವಿಷ್ಣುವಿನ ಪ್ರೀತಿಪಾತ್ರಳಾದ ಲಕ್ಷ್ಮೀಯು, ಶಿವನ ಸರ್ವಸ್ವಕ್ಕೂ ಪಾತ್ರಳಾದ ಪಾರ್ವತಿಯು, ಪದ್ಮನಿಲಯನಾದಬ್ರಹ್ಮಸಖಿಯಾದ ಸಕಲವಿದ್ಯಾಸ್ವರೂಪಳಾದ ಸರಸ್ವತಿಯೂ ನೀನೇ. ನಿನ್ನನ್ನು ಎಲ್ಲದಕ್ಕೂ ಕಾರಣವಾದ ಮೂಲಪ್ರಕೃತಿಯೆಂದು ಹೇಳುತ್ತಾರೆ. ಪರಬ್ರಹ್ಮನ ಮೂಲಶಕ್ತಿಯಾದ ನೀನೇ ಎಲ್ಲವನ್ನೂ ಸೃಷ್ಟಿಸುವವಳು, ನಿಗ್ರಹಿಸುವವಳು. ಸರ್ವೋತ್ತಮಳೇ! ದೇವಿಯೇ! ಎಲ್ಲವೂ ನೀನೇ.

ಕಸ್ತ್ವಾಂ ಸ್ತೋತುಮಿಹೇಶ್ವರಸ್ತ್ರಿಭುವನೇ ಬ್ರಹ್ಮಾದಯೋಽಪ್ಯಂಗಜಾಃ
ಶೇಷಸ್ತ್ವದ್ಗುಣಕೀರ್ತನಂ ಪರಿಚರನ್ನದ್ಯಾಪಿ ಪರ್ಯಸ್ಯತಿ ।
ಸತ್ಯಾನಂದಪರಾತ್ಮತಾಂ ತವ ಶಿವೇ! ಸ್ಪಷ್ಟಂ ವಿಧತ್ತೇ ಶ್ರುತಿ–
ರ್ಬ್ರೂತೇ ವಾಗ್ಘೃದಗೋಚರಾಂ ಕಥಮಿಮೇ ಬ್ರೂಮೋ ವಯಂ ತ್ವದ್ಗುಣಾನ್ ॥ ೨೫ ॥

ಮೂರು ಲೋಕದಲ್ಲಿಯೂ ನಿನ್ನನ್ನು ಸ್ತುತಿಸಲು ಯಾರು ಸಮರ್ಥರು? ಬ್ರಹ್ಮಾದಿಗಳೂ ಕೂಡ ನಿನ್ನ ಅಂಗಗಳಿಂದ ಜನಿಸಿದವರು. ಆದಿಶೇಷನು ನಿನ್ನ ಗುಣಕೀರ್ತನೆಯನ್ನು ಮಾಡುತ್ತಾ ಈಗಲೂ ಬಳಲಿದ್ದಾನೆ. ಹೇ ಶಿವೆಯೇ! ವೇದವು ನಿನ್ನ ಸತ್ಯಾನಂದಸ್ವರೂಪವನ್ನು ಸ್ಪಷ್ಟವಾಗಿ ಆದೇಶಿಸುತ್ತದೆ, ಮಾತಿಗೂ ಮನಸ್ಸಿಗೂ ಅಗೋಚರಳನ್ನಾಗಿ ತಿಳಿಸುತ್ತದೆ. ಸಾಮಾನ್ಯರಾದ ನಾವು ಹೇಗೆ ತಾನೇ ನಿನ್ನ ಗುಣಗಳನ್ನು ಹೇಳೋಣ?

॥ ಇತ್ಯಗಲ್ಪಾಡಿಮಾಹಾತ್ಮ್ಯೇ ತೃತೀಯಃ ಸ್ತಬಕಃ ॥
ಇಲ್ಲಿಗೆ ಅಗಲ್ಪಾಡಿಮಹಾತ್ಮೆಯಲ್ಲಿ ಮೂರನೇ ಸ್ತಬಕವು ಮುಗಿಯಿತು.

॥ ಅಥ ಚತುರ್ಥಃ ಸ್ತಬಕಃ ॥

ಇತಿ ವಚೋಭಿರಿಮಾಂ ಜಗದೀಶ್ವರೀಮಗಲಪಾಡಿಪುರಾಧಿನಿವೇಶನೀಮ್ ।
ದ್ವಿಜವರಾಃ ಪ್ರಣಯಾನತಕಂಧರಾ ಗಿರಿಸುತಾಂ ಸಸುತಾಃ ಸ್ಮ ಸಮೀಡತೇ ॥ ೧ ॥

ಜಗದೀಶ್ವರಿಯಾದರೂ ಅಗಲಪಾಡಿಪುರವಾಸಿನಿಯಾದ ಈ ಪಾರ್ವತಿಯನ್ನು ಪುತ್ರರೊಡಗೂಡಿದ ಬ್ರಾಹ್ಮಣಶ್ರೇಷ್ಠರು ಪ್ರೀತಿಯಿಂದ ಶಿರಬಾಗಿ ಈ ರೀತಿಯಾದ ಸ್ತುತಿವಚನಗಳಿಂದ ಸ್ತುತಿಸಿದರು.

ಅಥ ಗತೇಷು ಕಿಯತ್ಸ್ವಪಿ ಹಾಯನೇಷ್ವವನಿನಿರ್ಜರದೇಶ್ಯಕುಲಾಂಕುರಾಃ ।
ಮುಹುರವೇಕ್ಷ್ಯ ತದೀಯಸಮುನ್ನತಿಂ ಮನಸಿ ಮತ್ಸರಮುತ್ಸಮಿವಾದಧುಃ ॥ ೨ ॥

ನಂತರ ಕೆಲವು ವರ್ಷಗಳು ಕಳೆಯಲು, ದೇಶೀಯ ಬ್ರಾಹ್ಮಣವಂಶದ ಕೆಲವು ಮಕ್ಕಳು ಅವರ ಅಭಿವೃದ್ಧಿಯನ್ನು ನೋಡಿ ಮನಸ್ಸಿನಲ್ಲಿ ಮಾತ್ಸರ್ಯವನ್ನು ಹೊಂದಿದರು.

ಗುಣಗಣೇಷು ಮಹತ್ಸು ಮಹಾತ್ಮನಾಂ ವಿಕೃತಿಮೃಚ್ಛತಿ ಚಿತ್ತಮತದ್ವಿದಾಮ್ ।
ವಿಕಸತಿ ಸ್ಫುಟಮುತ್ಪಲಮುದ್ಗತೇ ಶಶಿನಿ ಮೀಲತಿ ಪಂಕಜಮಂಜಸಾ ॥ ೩ ॥

ಮಹಾತ್ಮರ ಮಹತ್ತರವಾದ ಗುಣಗಣಗಳ ವಿಷಯದಲ್ಲಿ ಗುಣಗಳನ್ನರಿಯದವರ ಮನಸ್ಸು ವಿಕಾರವನ್ನು ಹೊಂದುತ್ತದೆ. ಚಂದ್ರೋದಯವಾಗಲು ನೈದಿಲೆಯು ಸುಂದರವಾಗಿ ಅರಳಿದರೆ ತಾವರೆಯು ಕೂಡಲೇ ಮುದುಡುತ್ತದೆ.

ಅಥ ಕದಾಚನ ಕುಂಭನದೀಪತಿಃ ಕುಮುದಿನೀಸಖಕಾಂತತನುಚ್ಛವಿಃ ।
ಪರಿಚರನ್ ಪೃತನಾಭಿರಿದಂ ಪದಂ ಸಮಮಗಾತ್ ಸಮಗಾಧಿತಲಾಂಛನಃ ॥ ೪ ॥

ಹೀಗಿರಲು ಒಮ್ಮೆ ಚಂದ್ರಕಾಂತಮಣಿಯಂತೆ ಶರೀರಕಾಂತಿಯುಳ್ಳ ರಾಜಲಾಂಛನಸಹಿತನಾದ ಕುಂಭನದೀಪತಿಯು (ಕುಂಬಳೆಯರಾಜನು) ಸೇನೆಯೊಂದಿಗೆ ಸಂಚರಿಸುತ್ತಾ ಈ ಊರಿಗೆ ಬಂದನು.

ನೃಪಮುಪೇತಮನಾಕುಲಚೇತಸಃ ಕರಿತುರಂಗರಥೌಘತರಂಗಿತಮ್ ।
ಸುರನದೀಸಲಿಲಾಕರವೀಚಯಸ್ತಪನಜೌಘಮಿವಾನ್ವಭಿಪೇದಿರೇ ॥ ೫ ॥

ನಿಶ್ಚಲಚಿತ್ತರಾದ ಅವರು ಆನೆ–ಕುದುರೆ–ರಥಸಮೂಹದಿಂದೊಡಗೂಡಿ ಬಂದಂತಹ ರಾಜನನ್ನು ದೇವನದಿಯ ಅಲೆಗಳು ಸೂರ್ಯಕಿರಣಗಳನ್ನು ಹೇಗೋ ಹಾಗೆ ಎದುರುಗೊಂಡರು.

ವಿಧಿವದಾಸನಪಾದ್ಯಮುಖಾರ್ಚನಾಂ ನೃಪವರೇ ಪ್ರಣಿಧಾಯ ಮಹಾಶಯಾಃ ।
ವಿಬುಧಲೋಕಶಿಖಾಮಣಿಮಾದರಾದತಿಥಿಕೇತನಕರ್ಮಣಿ ಸಂದಧುಃ ॥ ೬ ॥

ಮಹಾಶಯರಾದ ಅವರು ಪಂಡಿತಜನಪ್ರಿಯನಾದ ಮಹಾರಾಜನಿಗೆ ವಿಧಿವತ್ತಾಗಿ ಆಸನಪಾದ್ಯಾದಿಸತ್ಕಾರವನ್ನು ಗೈದು ಆದರದಿಂದ ಅತಿಥಿಸತ್ಕಾರ ಕಾರ್ಯದಲ್ಲಿ ತೊಡಗಿದರು.

ಅಥ ವಿಧಾಯ ಸ ಸಾಂಧ್ಯವಿಧಿಂ ನೃಪಶ್ಚರಣಯೋಃ ಪ್ರಣಿಪತ್ಯ ಕೃತಾಂಜಲಿಃ ।
ಪರಿಣುನಾವ ಮಹಾರ್ಥವಚೋಮೃತೈರಧಿಗತೈರಗಜಾಂ ಗಜಗಾಮಿನೀಮ್ ॥ ೭ ॥

ನಂತರ ಆ ರಾಜನು ಸಂಧ್ಯಾವಿಧಿಗಳನ್ನು ಪೂರೈಸಿ, ಕೈಮುಗಿದು (ದೇವಿಯ) ಚರಣಗಳಲ್ಲಿ ನಮಸ್ಕರಿಸುತ್ತಾ ಗಜಗಾಮಿನಿಯಾದ ಪಾರ್ವತಿಯನ್ನು ತನಗೆ ತಿಳಿದ ಅರ್ಥಪೂರ್ಣವಾದ ವಚನಾಮೃತಗಳಿಂದ ಸ್ತುತಿಸಿದನು.

ನೃಪವರಾಯ ವರಾಸನಸೇದುಷೇ ಸಪರಿವಾರಕುಲಾಯ ಮಹಾತ್ಮನೇ ।
ವಿವಿಧಪಾಕರಸಾಶ್ರಿತಮೋದನಂ ದ್ವಿಜಕುಲಪ್ರವರಾಃ ಸಮುಪಾಹರನ್ ॥ ೮ ॥

ಉತ್ತಮಾಸನದಲ್ಲಿ ಕುಳಿತಂತಹ ಪರಿವಾರವೃಂದಸಹಿತನಾದ ಮಹಾತ್ಮನಾದ ಮಹಾರಾಜನಿಗೆ ಬ್ರಾಹ್ಮಣೋತ್ತಮರು ವಿಧವಿಧವಾದ ಅಡುಗೆಯ ರುಚಿಯಿಂದ ಕೂಡಿದ ಅನ್ನವನ್ನು ನೀಡಿದರು.

ಅನ್ನಾನಾಂ ಪಾಯಸಾನಾಂ ರುಚಿರರುಚಿಭೃತಾಂ ತೇಮನಾನಾಂ ಬಹೂನಾಂ
ಪಕ್ವಾನಾಮಗ್ನಿತೈಲೈರ್ದಧಿಘೃತಪಯಸಃ ಕೂರ್ಚಿಕಾಮಾರ್ಜಿತಾನಾಮ್ ।
ಚಾಂಗೇರೀಪೀಲುಕಾನಾಂ ಮಧುರರಸಯುಜಾಂ ಷಾಡವಾನಾಂ ಚ ವಾರಂ
ವಾರಂ ಭೂಪೋತ್ತಮಾಯ ಪ್ರಚುರಗುಣಕೃತಂ ಪ್ರೋಪಜಹ್ರುರ್ಮಹಿಷ್ಠಾಃ ॥ ೯ ॥

ಅನ್ನ-ಪಾಯಸಗಳ, ಅತಿರುಚಿಯಾದ ಮಜ್ಜಿಗೆಹುಳಿಗಳ, ಅನೇಕವಿಧವಾಗಿ ಬೆಂಕಿಯಲ್ಲಿ-ಎಣ್ಣೆಯಲ್ಲಿ ಹುರಿದ-ಕರಿದಂತಹವುಗಳ, ಹಾಲಿನಗಿಣ್ಣಿನಿಂದ-ಮೊಸರಿನಿಂದ ಮಾಡಿದ ಭಕ್ಷ್ಯಗಳ, ಚಾಂಗೇರೀಸಸ್ಯದ ಹೂವಿನಿಂದ ಮಾಡಿದ ಖಾದ್ಯವಿಶೇಷಗಳ (ಪುಳ್ಳಂಪುರಿಚಿ), ಸಿಹಿಯಾದ ತಿಂಡಿಗಳ ಅನೇಕ ಗುಣಗಳಿಂದ ಕೂಡಿದ ಷಡ್ರಸೋಪೇತವಾದ ಭೋಜನವನ್ನು ಭೂಪತಿಗೆ ಪುನಃ ಪುನಃ ಉಣಬಡಿಸಿದರು.

ಭುಕ್ತ್ವಾ ಮಿಷ್ಟಂ ಯಥೇಷ್ಟಂ ನೃಪಕುಲತಿಲಕಃ ಪ್ರೀತಿಮೃಚ್ಛನ್ ಸಸೈನ್ಯಃ
ಪರ್ಯಂಕೇ ವೀತಪಂಕೇ ಸುಖಶಯನಗತಃ ಸಮ್ಮಿಶಾದ್ರೌ ನಿದದ್ರೌ ।
ಪಶ್ಯನ್ನಾತ್ಮಾತಿಶಾಯಿದ್ವಿಜಕುಲಜನುಷಾಂ ವೈಭವಂ ಸನ್ನಚೇತಾ
ನಿದ್ರಾಣೋಽಪಿ ಸ್ಮ ನಿದ್ರಾಸುಖಮಗಮದಸೌ ನಾತ್ಮನೀಷ್ಟಾಂ ನದೀಷ್ಣಃ ॥ ೧೦ ॥

ಸೈನ್ಯಸಹಿತನಾದ ರಾಜಕುಲತಿಲಕನು ಯಥೇಚ್ಛವಾಗಿ ಮೃಷ್ಟಾನ್ನವನ್ನುಂಡು ಸಂತೃಪ್ತನಾಗಿ, ಶುಭ್ರವಾದ ಮಂಚದಲ್ಲಿರುವ ಮೆತ್ತನೆಯ ಹಾಸಿಗೆಯಲ್ಲಿ ಮಲಗಿದನು. ರಾಜನಾದ ತನ್ನ ವೈಭವನ್ನೂ ಮೀರಿದ ಬ್ರಾಹ್ಮಣಕುಲದವರ ವೈಭವವನ್ನು ನೆನೆದು ಕಸಿವಿಸಿಗೊಂಡ ಮನಸ್ಸಿನವನಾಗಿ ನಿಪುಣನಾದ ಆತನು ಮಲಗಿದ್ದರೂ, ತನಗೆ ಅಭಿಮತವಾದ ಸುಖನಿದ್ರೆಯನ್ನು ಹೊಂದಲಿಲ್ಲ.

ಮಾಹೇಂದ್ರೀವಾಥ ವಿದ್ಯಾ ದ್ವಿಜವರತಪಸಾಂ ವೈಭವಂ ಭೌತಿಕಾನಾ-
ಮುತ್ಪಾತಾನಾಂ ನು ಸತ್ತ್ವಂ ಗಿರಿವರತನಯಾನುಗ್ರಹೋ ವಾ ಬಲೀಯಾನ್ ।
ಉತ್ಥಾಯೋತ್ಥಾಯ ರಾತ್ರೌ ಕಿಮಿದಮಿತಿ ಬಲಾದಾಹೃತಾಂತರ್ವಿಮರ್ಶಃ
ಸರ್ವಂ ದೇವೀಪ್ರಭಾವೋತ್ಥಿತಮಿತಿ ಕಲಯನ್ ತತ್ರ ನೋ ವ್ಯಸ್ಮಯಿಷ್ಟ ॥ ೧೧ ॥

ಇದೇನು? ಇಂದ್ರಜಾಲವಿದ್ಯೆಯೋ, ದ್ವಿಜಶ್ರೇಷ್ಠರ ತಪಸ್ಸಿನ ವೈಭವವೋ, ಪರ್ವತರಾಜನ ಸುತೆಯ ಪ್ರಬಲವಾದ ಅನುಗ್ರಹವೋ ಎಂದು ರಾತ್ರಿಯಲ್ಲಿ ಮತ್ತೆ ಮತ್ತೆ ಎದ್ದು ಪ್ರಬಲವಾದ ವಿಮರ್ಶೆಗೊಳಗಾಗಿ, ಎಲ್ಲವೂ ದೇವಿಯ ಪ್ರಭಾವದಿಂದೊದಗಿದ್ದೆಂದು ತಿಳಿದು ಆ ವಿಷಯದಲ್ಲಿ ವಿಸ್ಮಿತನಾಗಲಿಲ್ಲ.

ಪಾರ್ಥಃ ಪೂರ್ವಂ ಸ್ವರಾಜ್ಯಚ್ಯುತಿವಿಷಮಗತಿಂ ಪ್ರಾಪ್ಯ ದೇವೀಪ್ರಸಾದಾತ್
ಸಂಪ್ರಾಪ್ತಾಕ್ಷಯ್ಯಶಸ್ತ್ರೋ ರಿಪುಕುಲಹನನಂ ಭಾರತಾಜೌ ಸ ಚಕ್ರೇ ।
ಅಭ್ಯಾಮರ್ದೇ ಶಿವಾಜೀ ರಿಪುಕುಲದಹನಃ ಶರ್ವಜಾಯಾಪ್ರಭಾವಾ-
ದಲ್ಪಾನೀಕೋಽಪಿ ಸರ್ವಂ ಯವನಬಲಮತಿಕ್ರಾಂತಶೌರ್ಯೋ ವಿಜಿಗ್ಯೇ ॥ ೧೨ ॥

ಹಿಂದೆ ಪಾರ್ಥನು ತನ್ನ ರಾಜ್ಯವನ್ನು ಕಳೆದುಕೊಂಡು ವಿಷಮಸ್ಥಿತಿಯನ್ನು ತಲುಪಿ ದೇವಿಯ ಪ್ರಸಾದದಿಂದ ಅಕ್ಷಯವಾದ ಶಸ್ತ್ರಗಳನ್ನು ಪಡೆದು ಭಾರತಯುದ್ಧದಲ್ಲಿ ಶತ್ರುಸಮೂಹನಾಶವನ್ನು ಮಾಡಿದನು. ಶತ್ರುಸಮೂಹಕ್ಕೆ ಬೆಂಕಿಯಂತಿರುವ ಶಿವಾಜಿಯು ಶಿವಪತ್ನಿಯ ಪ್ರಭಾವದಿಂದ ಮಹಾಬಲವನ್ನು ಪಡೆದು ಸಂಗ್ರಾಮದಲ್ಲಿ ಅಲ್ಪಸೈನ್ಯವುಳ್ಳವನಾದರೂ ಸಂಪೂರ್ಣ ಯವನಸೇನೆಯನ್ನು ಜಯಿಸಿದನು.

ಶ್ರೀವತ್ಸೋಽಪ್ಯೇಷ ಸಾಧಾರಣನೃಪಕುಲಜೋಽವಾಪ್ತಯೋಗಪ್ರಭಾವಃ
ಪ್ರಾಪ್ಯಾಶೇಷಾವನೀಶಾಸ್ಪದಮತುಲಬಲಃ ಸಂಹೃತಾಶೇಷಶತ್ರುಃ ।
ಏಕಚ್ಛತ್ರಾಧಿಪತ್ಯಂ ಗಿರಿವರತನಯಾನುಗ್ರಹೇಣಾಽಪ ಭೂಪಃ
ಕಿಂ ವಾಽಲಭ್ಯಂ ನೃಪಾಣಾಂ ಗಿರಿವರದುಹಿತಾ ಭೂಭುಜಾನಾಂ ಹಿ ದೈವಮ್ ॥ ೧೩ ॥

ಸಾಧಾರಣ ರಾಜವಂಶದಲ್ಲಿ ಜನಿಸಿದ ಅಸಮಪರಾಕ್ರಮಿಯಾದ ಆ ಶ್ರೀವತ್ಸಮಹಾರಾಜನೂ ಕೂಡ ಸಾಮಾದಿಚತುರೋಪಾಯಪ್ರಭಾವವನ್ನು ಬೀರಿ ಸಕಲಶತ್ರುಗಳನ್ನೂ ಸದೆಬಡಿದು ಎಲ್ಲಾ ರಾಜರ ಪ್ರದೇಶಗಳನ್ನೂ ಸ್ವಾಧೀನಪಡಿಸಿ ಗಿರಿರಾಜಕನ್ಯೆಯ ಅನುಗ್ರಹದಿಂದ ಏಕಛತ್ರಾಧಿಪತ್ಯವನ್ನು ಪಡೆದನು. ರಾಜರುಗಳಿಗೆ ಪಡೆಯಲಸಾಧ್ಯವಾದುದು ಏನು ತಾನೇ ಇದೆ? ಆ ಪಾರ್ವತಿಯು ಭೂಪಾಲಕರ ದೈವವಷ್ಟೇ!

ನೇಯಂ ವಿಪ್ರಾರ್ಚನಾರ್ಹಾ ಗಿರಿವರತನಯಾ ಚಾರ್ಚನೀಯಾ ಮಹೀಂದ್ರೈ–
ಸ್ತಸ್ಮಾದೇನಾಂ ಹರಿಷ್ಯೇ ಶಮನ ಇವ ಪರಃ ಕಿಂ ಕರಿಷ್ಯಂತಿ ವಿಪ್ರಾಃ ।
ಇತ್ಥಂ ನಿಶ್ಚಿತ್ಯ ಭೂಪೋ ವಿಕಸದಸಿಲತಾಪಾಣಿರಾಬದ್ಧಕಕ್ಷಃ
ಕ್ಷುದ್ರೈರಕ್ಷುದ್ರವೀರ್ಯೋ ಝಟಿತಿ ದೃಢಧೀಯೋತ್ಕೀಲಿತುಂ ಸನ್ನನಾಹ ॥ ೧೪ ॥

"ಈ ಪರ್ವತರಾಜಸುತೆಯು ವಿಪ್ರರಿಂದ ಅರ್ಚಿಸಲ್ಪಡಲು ಅರ್ಹಳಲ್ಲ, ಬದಲಾಗಿ ರಾಜರಿಂದ ಪೂಜಿಸಲ್ಪಡ್ಬೇಕು. ಆದ್ದರಿಂದ ಇವಳನ್ನು ಇನ್ನೊಬ್ಬ ಯಮನಂತಿರುವ ನಾನು ಒಯ್ಯುತ್ತೇನೆ. ಬ್ರಾಹ್ಮಣರು ಏನು ತಾನೇ ಮಾಡಿಯಾರು?" ಎಂದು ನಿರ್ಧರಿಸಿ ದುರ್ಬಲರಿಂದ ಎದುರಿಸಲಸಾಧ್ಯವಾದ ಬಲವುಳ್ಳ ರಾಜನು ಕೂಡಲೇ ಕೈಯಲ್ಲಿ ಹೊಳೆಯುತ್ತಿರುವ ಖಡ್ಗವುಳ್ಳವನಾಗಿ ಪಂಚೆಯನ್ನು ಮೇಲೆತ್ತಿಕಟ್ಟಿ ದೃಢಮನಸ್ಸಿನಿಂದ ದೇವೀವಿಗ್ರಹವನ್ನು ಕೀಳಲು ಸಿದ್ಧನಾದನು.

ದೃಷ್ಟ್ವಾ ಕರ್ಮಾತಿಧೃಷ್ಟಂ ಧರಣಿವರಪಶೋಃ ಪ್ರೋತ್ಸೃತಾಂಸ್ತಾನ್ ದ್ವಿಜೇಂದ್ರಾನ್
ಸಮ್ಮರ್ದೇಚ್ಛೂನ್ ನಿವಾರ್ಯ ಪ್ರಸಭಮುಪಸೃತೋ ದೇವಗೋವಿಂದಶರ್ಮಾ ।
ವಾಕ್ಯೈರ್ಮಾನ್ಯೈರಮಾನ್ಯೈರಪಿ ವಿವಿಧರಸೈರ್ಬೋಧಯಾಮಾಸ ಭೂಪಂ
ಯಾವಚ್ಛಕ್ಯಂ ಯತಂತೇ ಭುವಿ ವಿಪುಲಧಿಯೋ ದೈವಮತ್ರಾತಿರಿಕ್ತಮ್ ॥ ೧೫ ॥

ಆ ರಾಜನೆಂಬ ಪ್ರಾಣಿಯ ನೀಚಕಾರ್ಯವನ್ನು ನೋಡಿ ಹಿಂಸೆಯನ್ನು ಬಯಸಿ ಮುಂದುವರೆದ ಬ್ರಾಹ್ಮಣರನ್ನು ಬಲವಂತದಿಂದ ತಡೆದು ಮುಂದೆ ಬಂದ ದೇವಗೋವಿಂದಶರ್ಮನು ವಿಧವಿಧವಾದ ಮೃದು-ಕಠೋರನುಡಿಗಳಿಂದ ರಾಜನಿಗೆ ಬೋಧನೆ ಮಾಡಿದನು. ವಿಶಾಲಬುದ್ಧಿಯುಳ್ಳವರು ಭೂಮಿಯಲ್ಲಿ ಯಥಾಶಕ್ತಿ ಪ್ರಯತ್ನವನ್ನು ಮಾಡುತ್ತಾರೆ, ಇಲ್ಲಿ ದೈವವು ಮಾತ್ರ ವಿಭಿನ್ನವಾದುದು.

ನೇಯಂ ರಾಜನ್ಯನೀತಿರ್ಜನಪ! ಸುಜನತಾ ನೇಯಮೀಶಪ್ರಭಾವೋ
ನಾಯಂ ವಿಶ್ವೋತ್ತರಾಣಾಂ ಭವತಿ ನರಪತೇ! ತ್ವಾದೃಶಾಂ ಗರ್ಹಣೀಯಮ್ ।
ವಿಪ್ರಾ ಧರ್ಮಾನುಭಾವಂ ವಿದುರಮಲಧಿಯೋ ವೈದಿಕೈಸ್ತಾಂತ್ರಿಕೈರ್ವಾ
ಸಿದ್ಧಾನಾಂ ಕರ್ಮಣಾಂ ಯೇ ವಿದಧತಿ ವಿಪುಲಾನುಷ್ಠಿತೀಂ ನಾತ್ರ ಶಂಕಾ ॥ ೧೬ ॥

ರಾಜನೇ! ಇದು ರಾಜನೀತಿಯಲ್ಲ, ಧರ್ಮಬುದ್ಧಿಯೂ ಅಲ್ಲ, ಇದು ರಾಜನಿಗೆ ಶ್ರೇಯಸ್ಕರವೂ ಅಲ್ಲ. ಲೋಕೋತ್ತರರಾದ ನಿನ್ನಂಥವರಿಗೆ ಇದು ಅವಮಾನಕರವು. ವಿಪ್ರರು ಧರ್ಮದ ಪ್ರಭಾವವನ್ನು ತಿಳಿದಿರುತ್ತಾರೆ. ವಿಮಲಬುದ್ಧಿಯುಳ್ಳ ಅವರು ವೈದಿಕ–ತಾಂತ್ರಿಕವಿಧಿಗಳಿಂದ ಸಿದ್ಧವಾದ ಅನೇಕ ಕರ್ಮಗಳ ಅನುಷ್ಠಾನಗಳನ್ನು ಮಾಡುತ್ತಾರೆ. ಇದರಲ್ಲಿ ಯಾವುದೇ ಸಂಶಯವಿಲ್ಲ.

ಮಾ ಭೂದೇವಂ ಮಹೀಷ್ಠಾ ತವ ಜನಪ! ಮತಿರ್ಬ್ರಾಹ್ಮಣಾ ಭೂಮಿದೇವಾಃ
ಬ್ರಹ್ಮಕ್ಷತ್ರಂ ಸಮೇತಂ ಜ್ವಲತಿ ವಿದಲಿತಂ ಗಾಹತೇಽಂಗಾರಮುದ್ರಾಮ್ ।
ಪಶ್ಯಾಽತ್ಮಾನಂ ಪ್ರಜಾತಂ ಧರಣಿಸುರವರಾತ್ ಬ್ರಾಹ್ಮಣಾ ವರ್ಣವರ್ಯಾ
ಬ್ರಹ್ಮ ಕ್ರುದ್ಧಂ ತ್ವದೀಯಂ ವಿಪುಲಮಪಿ ಕುಲಂ ಭಸ್ಮತಾಂ ನೇಷ್ಯತೇ ಚ ॥ ೧೭ ॥

ಎಲೈ ರಾಜನೇ! ನಿನಗೆ ಈ ರೀತಿಯ ಕೆಳಮಟ್ಟದ ಬುದ್ಧಿಯು ಬೇಡ. ಬ್ರಾಹ್ಮಣರು ಭೂಮಿಯಲ್ಲಿರುವ ದೇವತೆಗಳು. ಬ್ರಾಹ್ಮಣ–ಕ್ಷತ್ರಿಯರು ಒಂದಾದರೆ ಪ್ರಜ್ವಲಿಸುವರು, ಬೇರಾದರೆ ಇದ್ದಲಿನಂತಾಗುವರು. ನೋಡು! ನೀನೂ ಬ್ರಾಹ್ಮಣಶ್ರೇಷ್ಠನ ಅನುಗ್ರಹದಿಂದ ಜನಿಸಿದವನೇ. ಬ್ರಾಹ್ಮಣರು ವರ್ಣಗಳಲ್ಲಿ ಶ್ರೇಷ್ಠರು. ಕ್ರೋಧಗೊಂಡ ಬ್ರಹ್ಮತೇಜವು ನಿನ್ನ ವಿಸ್ತೃತವಾದ ಕುಲವನ್ನೇ ಭಸ್ಮಗೊಳಿಸುವುದು.

ಧನ್ಯಂ ಧರ್ಮ್ಯಂ ಯಶಸ್ಯಂ ಧರಣಿವರವರ್ಯೈಃ ಕ್ಷೋಣಿಪಾಲೈರ್ವಿಧೇಯಂ
ಲೋಕಪ್ರೇಪ್ಸಾ ಹಿ ಧರ್ಮೋ ವಿಲಸತಿ ನಿತರಾಂ ಭೂಭುಜಾಮನ್ಯಥಾಽನ್ಯಃ ।
ಪಶ್ಯೋದ್ಯಂತಂ ಸ್ವಕೀಯಂ ಜಗತಿ ನರಪತೇ! ಕೀರ್ತಿಚಂದ್ರಂ ಸುಪೂರ್ಣಂ
ನೈನಂ ಬಾಧೇತ ಭೂಯೋ ದುರಿತಕುಲಪರಿಬ್ರಹ್ಮಣೋ ರಾಜಯಕ್ಷ್ಮಾ ॥ ೧೮ ॥

ಉತ್ತಮವಾದ, ಧರ್ಮವನ್ನು ಮೀರದಿರುವ, ಯಶಸ್ಸನ್ನುಂಟುಮಾಡುವ ಕಾರ್ಯವನ್ನು ರಾಜರು ಮಾಡಬೇಕು. ಜನರನ್ನು ತನ್ನವರನ್ನಾಗಿಸುವ ಇಚ್ಛೆಯೇ ರಾಜರುಗಳಿಗೆ ಅತ್ಯಂತ ಶೋಭೆ ತರುವ ಧರ್ಮವು, ಹಾಗಲ್ಲದಿದ್ದಲ್ಲಿ ಅಧರ್ಮವು. ರಾಜನೇ! ಜಗತ್ತಿನಲ್ಲಿ ಉದಯಿಸಿರುವ ನಿನ್ನ ಕೀರ್ತಿಯೆಂಬ ಪೂರ್ಣಚಂದ್ರಮನನ್ನು ನೋಡು. ಪಾಪಸಮೂಹಪರಿವೃತವಾದ ಕ್ಷಯ (ರೋಗ) ವು ಈ ಚಂದ್ರನನ್ನು ಪುನಃ ಬಾಧಿಸದಿರಲಿ.

ಶೃಣ್ವನ್ನಪ್ಯೇಷ ವಾಣೀಮುರುರವಗದಿತಾಂ ಭೂಸುರಸ್ಯಾತ್ಮನೀನಾ–
ಮೇನಾಮಾಹರ್ತುಕಾಮೋ ಮದಕಲ ಇವ ತದ್ಗರ್ಭಗೇಹಂ ಪ್ರವಿಷ್ಟಃ ।
ವಾಮೇನಾಽಲಭ್ಯ ಬಿಂಬಂ ತದನು ನೃಪವರಃ ಪಾಣಿನಾ ದಕ್ಷಿಣೇನ
ಪ್ರಾರಬ್ಧೋತ್ಕ್ರಾಂತಿಕೃತ್ಯೋ ವಿಗಲಿತಜವನೋ ವಿಸ್ಮಿತಸ್ವಾಂತರಂಗಃ ॥ ೧೯ ॥

ಆ ರಾಜನು ತನಗೆ ಹಿತಕರವಾದ, ಉಚ್ಚಸ್ವರದಿಂದ ಹೇಳಲ್ಪಟ್ಟ, ಬ್ರಾಹ್ಮಣನ ಮಾತನ್ನು ಕೇಳಿಯೂ ದೇವಿಯನ್ನು ಒಯ್ಯುವ ಅಪೇಕ್ಷೆಯುಳ್ಳವನಾಗಿ ಮದ್ದಾನೆಯಂತೆ ಗರ್ಭಗೃಹವನ್ನು ಪ್ರವೇಶಿಸಿದನು. ಎಡಕೈಯಿಂದ ಬಿಂಬವನ್ನು ಸುತ್ತುಬಳಸಿ ಹಿಡಿದು, ನಂತರ ಬಲಕೈಯಿಂದ ಮೇಲಕ್ಕೆಳೆಯಲಾರಂಭಿಸಿ ಕ್ಷೀಣಬಲವುಳ್ಳವನಾಗಿ ಮನಸ್ಸಿನಲ್ಲೇ ಆಶ್ಚರ್ಯಗೊಂಡನು.

ಸಂಗ್ರಾಮೋತ್ಕ್ಷಿಪ್ತಶಕ್ತಿಪ್ರಹರಣಪತಿತಾಸ್ವಸ್ಥಸೌಮಿತ್ರಿಭಾರ-
ಪ್ರಕ್ಷೀಣಾನಂತಶಕ್ತಿರ್ದಶಮುಖ ಇವ ಸನ್ ನಿಃಶ್ವಸನ್ನೇಕವೀರಃ ।
ಅಭ್ಯಾಪನ್ನಂ ದ್ವಿಜಾನಾಂ ಗಣಮಪಿ ವಿಮೃಶನ್ ಖಡ್ಗವಲ್ಲೀಸಹಾಯೋ
ಬಿಂಬಂ ಶಕ್ತ್ಯಾಖ್ಯಮಾರಾತ್ ಸಪದಿ ಪರಿಮೃಶನ್ ಸಂಭ್ರಮಾತ್ ಸಂಪ್ರತಸ್ಥೇ ॥ ೨೦ ॥

ಯುದ್ಧದಲ್ಲಿ ಪ್ರಯೋಗಿಸಿದ ಶಕ್ತ್ಯಾಯುಧದ ಪ್ರಹಾರದಿಂದ ಮೂರ್ಛಿತನಾದ ಲಕ್ಷ್ಮಣನ ಭಾರದಿಂದ ಶಕ್ತಿಯು ಕ್ಷೀಣಿಸಲ್ಪಟ್ಟು ನಿಟ್ಟುಸಿರನ್ನು ಬಿಡುತ್ತಿರುವ ಮಹಾಬಲನಾದ ರಾವಣನಂತೆ, ತಡೆಯಲು ಬಂದ ಬ್ರಾಹ್ಮಣರ ಸಮೂಹವನ್ನು ನೋಡಿ ಏಕಾಂಗಿವೀರನಾದ ರಾಜನು ಖಡ್ಗದ ಸಹಾಯವುಳ್ಳವನಾಗಿ, ಶಕ್ತಿಬಿಂಬವನ್ನು ಹಿಡಿದುಕೊಂಡು ಅವಸರದಿಂದ ಹೊರಟನು.

ಪ್ರಾಪ್ಯಾನಂತಾಸನಾಖ್ಯಂ ಪುರಮಯಮಮಲಂ ಶಕ್ತಿಲಕ್ಷ್ಮೀಸನಾಥೋ
ನಾಥೋ ಭೂಮೇರನಾಥೋದ್ಧರಣಕೃತಜವೋ ಬಿಂಬಮಂಬಾನುವಾಸ್ಯಮ್ ।
ಜಾನನ್ ಜನ್ಮಾತಿರೇಕಂ ಜನಪದನಿಲಯೈರ್ಭೂಸುರೈರ್ದತ್ತದೀಕ್ಷೋ
ಗೇಹೋಪಾಂತೇ ಮಠಾಂತೇ ವಿಕಸಿತಹೃದಯಃ ಸನ್ನಿಧೌ ಸಂದಧೇ ಚ ॥ ೨೧ ॥

ಅನಾಥೋದ್ಧಾರಕನಾದ ಭೂಪತಿಯು ಶಕ್ತಿಬಿಂಬಸಹಿತನಾಗಿ ಪವಿತ್ರವಾದ ಅನಂತಪುರವನ್ನು ಸೇರಿ ಅಂಬಿಕೆಯ ಸಾನ್ನಿಧ್ಯವಿರುವ ಬಿಂಬವನ್ನು ಜನ್ಮದ ಶ್ರೇಷ್ಠತೆಯೆಂದು ತಿಳಿದು, ಆ ಊರಿನ ಬ್ರಾಹ್ಮಣರಿಂದ ಪೂಜಾದೀಕ್ಷೆಯನ್ನು ಕೊಡಲ್ಪಟ್ಟವನಾಗಿ ಮನೆಯ ಸಮೀಪದ ಮಠದಲ್ಲಿ ಸಂತುಷ್ಟಹೃದಯನಾಗಿ ಇರಿಸಿದನು.

ಋದ್ಧಂ ಕೋಶಂ ಸಮಸ್ತಂ ಜನಪದಸುಹೃದೋ ರಾಷ್ಟ್ರದುರ್ಗಾಣ್ಯಮಾತ್ಯಾನ್
ಸ್ವಾಮೀ ಸೈನ್ಯಂ ಚತುರ್ಧಾಽಹಿತಮಪಿ ಸಕಲಂ ವಿಪ್ರದೇವೀಪ್ರಕೋಪಾತ್ ।
ಪ್ರಕ್ಷೀಣಂ ಯಾವದಾಸೀತ್ ಪ್ರಚಕಿತಹೃದಯಸ್ತಾವದಭ್ಯೇತ್ಯ ಭೂಯೋ
ವಿಪ್ರಾಭ್ಯಾಶೇ ಭವಂತಃ ಶರಣಮಿತಿ ವದನ್ ಪಾದಯೋಃ ಸಂಪಪಾತ ॥ ೨೨ ॥

ಬ್ರಾಹ್ಮಣರು ಮತ್ತು ದೇವೀಪ್ರಕೋಪದಿಂದಾಗಿ ಸಮೃದ್ಧವಾದ ಸಂಪೂರ್ಣಭಂಡಾರ, ಊರಿನ ಮಿತ್ರರು, ರಾಜ್ಯ-ಕೋಟೆ-ಮಂತ್ರಿಗಳು, ಚತುರಂಗಸೈನ್ಯ ಇವೆಲ್ಲವೂ ಯಾವಾಗ ನಷ್ಟವಾಯಿತೋ ಆಗ ರಾಜನು ಭಯದಿಂದ ನಡುಗಿದ ಮನಸ್ಸುಳ್ಳವನಾಗಿ ಪುನಃ ಬ್ರಾಹ್ಮಣರ ಬಳಿ ಬಂದು ನೀವೇ ಕಾಪಾಡಬೇಕೆಂದು ಹೇಳುತ್ತಾ ಕಾಲಿಗೆರಗಿದನು.

ಸಭ್ಯಾ ಭೂಪಾಲಮೌಲಿಂ ದ್ವಿಜಕುಲತಿಲಕಾಃ ಪ್ರೇಮಸಂಫುಲ್ಲನೇತ್ರಾ
ಭಕ್ತ್ಯಾಸನ್ನಂ ಪ್ರಪನ್ನಂ ರಚಿತಗಿರಿಸುತಾಧ್ಯಾನಪೂತಾಂತರಂಗಾಃ ।
ಮಾ ಭೈಷೀರ್ಭೂಪವರ್ಯ! ಪ್ರಭವತು ಭವತೇ ಮಂಗಲಂ ಸಂಗತಾಯ
ಪ್ರಾಣಾಃ ಪ್ರೇಷ್ಠಾ ಸಮೇಷಾಮಿತಿ ಗಿರಮವದನ್ನಂಬಿಕಾಪ್ರೇರಿತಾರ್ಥಾಃ ॥ ೨೩ ॥

ಸಜ್ಜನರಾದ, ಬ್ರಾಹ್ಮಣಕುಲಕ್ಕೆ ತಿಲಕದಂತಿರುವ, ಪ್ರೀತಿಯಿಂದ ಅರಳಿದ ಕಣ್ಣುಗಳುಳ್ಳ ಅವರು ದೇವಿಯ ಧ್ಯಾನವನ್ನು ಮಾಡಿ ಪವಿತ್ರವಾದ ಅಂತಃಕರಣವುಳ್ಳವರಾಗಿ ಭಕ್ತಿಯಿಂದ ಶರಣಾಗತನಾದ ರಾಜಶ್ರೇಷ್ಠನನ್ನು ಕುರಿತು - "ರಾಜಶ್ರೇಷ್ಠನೇ! ಹೆದರಬೇಡ, ಬಂದಿರುವಂತಹ ನಿನಗೆ ಮಂಗಳವಾಗಲಿ, ಎಲ್ಲರಿಗೂ ಪ್ರಾಣವೇ ಪ್ರಿಯತಮವಾಗಿರುವುದಾಗಿದೆ" ಎಂಬ ಮಾತನ್ನು ಜಗದಂಬೆಯಿಂದ ಪ್ರೇರೇಪಿಸಲ್ಪಟ್ಟವರಾಗಿ ಹೇಳಿದರು.

ತೇಷಾಂ ಮಧ್ಯೇ ಗರೀಯಾನ್ ಗುರುರವನಿಪತಿಂ ಪ್ರಾಹ ರಾಜೇಂದ್ರ! ದೇವೀ
ಭಕ್ತ್ಯಾ ಭಾವತ್ಕಯಾಽದ್ಯ ಪ್ರಮುದಿತಹೃದಯಾ ಮನ್ಮುಖೇನೇದಮಾಹ ।
ಭಕ್ತಿಃ ಶ್ರದ್ಧಾ ಚ ವಿದ್ಯಾ ಪ್ರಣತಿರಪಿ ಸತಾಂ ಮಾನನೀಯಾ ಗುಣಾಸ್ತೇ
ಭೂಯಾಸುರ್ಭೂಪ! ನಿತ್ಯಂ ಭವತಿ, ಪರಿಚರ ಸ್ವಾತ್ಮನಾ ಮಾಂ ನಿಕಾಮಮ್ ॥ ೨೪ ॥

ಅವರಲ್ಲಿ ಹಿರಿಯರಾದ ವಿಪ್ರರೊಬ್ಬರು ರಾಜನನ್ನು ಕುರಿತು "ರಾಜೇಂದ್ರನೇ! ನಿನ್ನ ಭಕ್ತಿಯಿಂದ ಸಂತುಷ್ಟಳಾದ ದೇವಿಯು ನನ್ನ ಮೂಲಕ ಈ ಮಾತನ್ನು ಹೇಳುತ್ತಿದ್ದಾಳೆ. ರಾಜನೇ! ಭಕ್ತಿ, ಶ್ರದ್ಧೆ, ವಿದ್ಯೆ, ವಿನಯ ಮೊದಲಾದತಂಹ ಗುಣಗಳು ಸಜ್ಜನರಿಗೆ ಆದರಣೀಯವಾದವುಗಳು. ಅವು ಯಾವಾಗಲೂ ನಿನ್ನಲ್ಲಿ ನೆಲೆಸಲಿ. ನಿನ್ನ ಅಂತಃಕರಣದಿಂದ ನನ್ನನ್ನು ಅತಿಶಯವಾಗಿ ಆರಾಧಿಸು".

ನೈವೇದ್ಯಂ ಭಕ್ತಿಪೂತಂ ತ್ರಿಗುಣಮನುದಿನಂ ದೇಯಮಾನಂದದೀಪೋ
ದೇಯೋ ಭೂಪಾಲವರ್ಯ! ಪ್ರತಿದಿನಮಹತಂ ಜೇಮನಂ ಬ್ರಾಹ್ಮಣೇಭ್ಯಃ ।
ಯಸ್ಮಾಂ ಯಾತೋಽಸಿ ರಾಜನ್! ಪ್ರಸಭಮಪಹರನ್ ಮಾಯಯಾ ಸಂದಧಾನೋ
ಮಾಯಾಬಿಂಬಂ ತದೇತದ್ವಸತು ನರಪತೇ! ತ್ವದ್ಗೃಹೇ ಮನ್ನಿದೇಶಾತ್ ॥ ೨೫ ॥

ಪ್ರತಿದಿನವೂ ಮೂರುಬಾರಿ ಭಕ್ತಿಯಿಂದ ಪರಿಶುದ್ಧವಾದ ನೈವೇದ್ಯವನ್ನು ಸಮರ್ಪಿಸಬೇಕು, ನಂದಾದೀಪವನ್ನು ಹಚ್ಚಬೇಕು, ಶ್ರೇಷ್ಠಭೂಪಾಲಕನೇ! ಪ್ರತಿದಿವಸವೂ ಅವ್ಯಾಹತವಾಗಿ ಬ್ರಾಹ್ಮಣರಿಗೆ ಭೋಜನವನ್ನು ನೀಡಬೇಕು. ಎಲೈ ರಾಜನೇ! ಯಾವಕಾರಣದಿಂದ ಬಲವಂತವಾಗಿ ಮೋಸದಿಂದ ನನ್ನನ್ನು ಅಪಹರಿಸಿ ಹೊತ್ತುಕೊಂಡು ಹೋಗಿರುವಿಯೋ; ಆ ಕಾರಣಕ್ಕಾಗಿ, ನರಪತಿಯೇ! ಈ ಮಾಯಾಬಿಂಬವು ನನ್ನ ಆದೇಶದಿಂದ ನಿನ್ನ ಮನೆಯಲ್ಲಿಯೇ ಇರಲಿ.

ಇತ್ಥಂ ಭೂಮೀಶ್ವರಸ್ತೈರವನಿಸುರವರ್ಯೈರ್ಭೂಸುರೇಂದ್ರೇಣ ಚಾಂಬಾ–
ಭಕ್ತ್ಯಾ ಶಕ್ತ್ಯಾ ಚ ದಿಷ್ಟಃ ಪ್ರಮುದಿತಹೃದಯಃ ಸ್ವಾಲಯಂ ನಿರ್ಜಗಾಮ ।
ಪ್ರೋಕ್ತಂ ಸರ್ವಂ ಸಮಾಸ್ಥಾನ್ನೃಪತಿರನುದಿನಂ ತನ್ಮನಸ್ಕೋಽಥ ತಸ್ಮಾತ್
ಮಾಯಾಪಾಡೀತಿ ಲೋಕವ್ಯವಹೃತಮಭವತ್ತತ್ಪುರಂ ತತ್ಪರಸ್ತಾತ್ ॥ ೨೬ ॥

ಹೀಗೆ ಭೂಪತಿಯು ಅಂಬಿಕಾಭಕ್ತಿಯಿಂದ ಹಾಗೂ ಶಕ್ತಿಯಿಂದ ಆ ಬ್ರಾಹ್ಮಣೋತ್ತಮರಿಂದಲೂ ವೃದ್ಧಬ್ರಾಹ್ಮಣನಿಂದಲೂ ಆದೇಶಿಸಲ್ಪಟ್ಟು ಸಂತುಷ್ಟಹೃದಯನಾಗಿ ತನ್ನ ಮನೆಗೆ ಹಿಂತಿರುಗಿದನು. ಅನಂತರ ರಾಜನು ಪ್ರತಿದಿನವೂ ಹೇಳಿದಂತಹ ಎಲ್ಲವನ್ನೂ ತನ್ಮನಸ್ಕನಾಗಿ ಆಚರಿಸಿದನು. ಆ ಕಾರಣದಿಂದಾಗಿ (ಮಾಯಾಬಿಂಬ ನೆಲೆಸಿದ್ದರಿಂದ) ತದನಂತರ ಆ ಊರು 'ಮಾಯಾಪಾಡಿ'ಯೆಂದು ಜನರಿಂದ ವ್ಯವಹರಿಸಲ್ಪಟ್ಟಿತು.

॥ ಇತ್ಯಗಲ್ಪಾಡಿಮಾಹಾತ್ಮ್ಯೇ ಚತುರ್ಥಃ ಸ್ತಬಕಃ ॥
ಇಲ್ಲಿಗೆ ಅಗಲ್ಪಾಡಿಮಹಾತ್ಮೆಯಲ್ಲಿ ನಾಲ್ಕನೇ ಸ್ತಬಕವು ಮುಗಿಯಿತು.

॥ ಅಥ ಪಂಚಮಃ ಸ್ತಬಕಃ ॥

ತಿಷ್ಯೇ ಪಂಚಸಹಸ್ರವತ್ಸರಗತೇ ದ್ವಾವಿಂಶತೌ ವತ್ಸರೇ
ಜೀರ್ಣೇ ಪೂರ್ಣಪುರಾತನಾಯತನನಿರ್ಮಾಣೇ ಮಹೀನಿರ್ಜರಾಃ ।
ಸಂಭೂಯಾತುಲಶಿಲ್ಪನೈಪುಣಲಸತ್ಕಾರುಪ್ರವೇಕೈರ್ನವಂ
ಚಕ್ರುರ್ಗರ್ಭಗೃಹಂ ತದಂಶಕಲಯಾ ಸಾಮಂತಗೇಹಾನ್ಯಪಿ ॥ ೧ ॥

ಕಲಿಯುಗದಲ್ಲಿ ಐದುಸಾವಿರ ವರ್ಷಗಳ ನಂತರ ಇಪ್ಪತ್ತೆರಡನೇಯ (೫೦೨೨) (೧೯೨೨ ನೇ ಇಸವಿ) ವರ್ಷವು ಬರಲು, ಹಳೆಯ ಆಲಯವು ಜೀರ್ಣವಾಗಿರಲು, ಬ್ರಾಹ್ಮಣರು ಒಂದಾಗಿ ಅದ್ವಿತೀಯಶಿಲ್ಪನೈಪುಣ್ಯ ಹೊಂದಿದ ಶಿಲ್ಪಿಶ್ರೇಷ್ಠರ ಸಹಾಯದಿಂದ ಹೊಸದಾದ ಗರ್ಭಗೃಹವನ್ನು, ಅದಕ್ಕೆ ಹೊಂದುವಂತೆ ಸುತ್ತುಪ್ರಾಕಾರಗಳನ್ನೂ ನಿರ್ಮಿಸಿದರು.

ಪಂಚಾಽಸನ್ನಿಹ ಭೂಸುರಾಃ ಪರಿಣತಾಧೀಕಾರಭೂಮೋಜ್ವಲಾಃ
ಕೇಪ್ಯನ್ಯೇದ್ಧೃತಕಾರ್ಯದರ್ಶಕಪದಪ್ರಾಗ್ಭಾರನದ್ಧಾಶಯಾಃ ।
ಕಾರ್ಯಾಕಾರ್ಯವಿಚಾರಭಾರಕಲನಪ್ರಾಗಲ್ಭ್ಯಸಂಧಾನಿತಾ-
ಶ್ಚಾಽಸನ್ ಕೇಚನ ಕೇಚನಾಖಿಲಗುಣಪ್ರೇಕ್ಷಾವಿಲಾಸಾನ್ವಿತಾಃ ॥ ೨ ॥

ಇಲ್ಲಿ ಅಧಿಕಾರದ ಹೆಚ್ಚುಗಾರಿಕೆಯಿಂದ ಐವರು ಬ್ರಾಹ್ಮಣರು ಶೋಭಿಸುತ್ತಿದ್ದು, ಇನ್ನು ಕೆಲವರು ಕಾರ್ಯದರ್ಶಿಪದವಿಯ ಹೊಣೆಯನ್ನು ಹೊತ್ತಿದ್ದರು. ಮತ್ತೆ ಕೆಲವರು ಕಾರ್ಯ–ಅಕಾರ್ಯಗಳ ವಿವೇಚನೆಯಲ್ಲಿ ನೈಪುಣ್ಯವನ್ನು ಸಾಧಿಸಿದ್ದರು. ಇನ್ನು ಕೆಲವರು ಇಲ್ಲಿರುವ ಎಲ್ಲಾ ಗುಣಗಳನ್ನು ನೋಡಿ ಸಂತೋಷಪಡುವವರಾಗಿದ್ದರು.

ತಂತ್ರೋಕ್ತೇನ ವಿಧೇಯಕರ್ಮವಿತತಿಂ ಸಂಪ್ರಾಪ್ಯ ಸನ್ನಾಹತ–
ಸ್ತೇಽನುಜ್ಞಾಕಲಶಂ ವಿಧಾಯ ವಿಧಿವಲ್ಲಬ್ಧ್ವಾಽಭ್ಯನುಜ್ಞಾಂ ಮುಹುಃ ।
ದೇಯಾದೇಯವಿಚಾರಚಾರಚಲನಪ್ರಾಶಂಸಕೋದ್ವೇಲ್ಲಿತಾ–
ಸ್ತತ್ರಾಸನ್ನಿಯತಾಪ್ತಧರ್ಮನಿಯಮಪ್ರಾಶಸ್ತ್ಯನಿರ್ವಾಹಕಾಃ ॥ ೩ ॥

ಅವರು ತಂತ್ರೋಕ್ತವಿಧಾನದಿಂದ ಮಾಡಬೇಕಾದ ಕರ್ಮಕಲಾಪಗಳನ್ನು ಮಾಡಿ, ಪ್ರಯತ್ನಪೂರ್ವಕವಾಗಿ ಅನುಜ್ಞಾಕಲಶವನ್ನು ಮಾಡಿ ವಿಧಿವತ್ತಾಗಿ ಅನುಜ್ಞೆಯನ್ನು ಪಡೆದು, ಭಗವತಿಗೆ ಸಲ್ಲಿಸಬೇಕಾದ ಹಾಗೂ ಸಲ್ಲಿಸಲು ಅನರ್ಹವಾದ ವಸ್ತುಗಳನ್ನು ಕುರಿತು ವಿಚಾರಮಾಡುವುದರಲ್ಲಿ ಕುಶಲರಾದ ಆ ಐವರು ಧಾರ್ಮಿಕನಿಯಮಗಳ ಪ್ರಾಶಸ್ತ್ಯವನ್ನು ತೀರ್ಮಾನಿಸುವ ಧರ್ಮದರ್ಶಿಗಳಾದರು.

ನಿರ್ಮಾಯಾಽಽಯತನಂ ನಗೇಂದ್ರದುಹಿತುರ್ವರ್ಷೇ ಚತುರ್ವಿಂಶಕೇ
ಕರ್ತುಂ ಪ್ರಾರಭತಾಽಥ ವಿಪ್ರನಿಚಯಃ ಕುಂಭಾಭಿಷೇಕೋತ್ಸವಮ್ ।
ಬೀಜನ್ಯಾಸವಿಧಿಂ ವಿಧಾಯ ವಿಧಿವನ್ಮಂತ್ರೀ ಸಮಸ್ತಾಂಗಕ–
ಶ್ಚಕ್ರೇ ಮಂಡಪಸಂಸ್ಕ್ರಿಯಾಂ ಚ ಘಟವಿಶ್ರಾಂತ್ಯಾದಿಕರ್ಮಾಖಿಲಮ್ ॥ ೪ ॥

ಪರ್ವತರಾಜಪುತ್ರಿಗೆ ಆಲಯವನ್ನು ನಿರ್ಮಿಸಿ ಇಪ್ಪತ್ತನಾಲ್ಕನೆಯ ವರ್ಷದಲ್ಲಿ ವಿಪ್ರವೃಂದವು ಕುಂಭಾಭಿಷೇಕೋತ್ಸವವನ್ನು ಮಾಡಲು ಪ್ರಾರಂಭಿಸಿತು. ಮಂತ್ರಜ್ಞನು (ತಂತ್ರಿ) ವಿಧಿವತ್ತಾಗಿ ಬೀಜನ್ಯಾಸವಿಧಿಯನ್ನು ಮಾಡಿ ಸಾಂಗವಾಗಿ ಮಂಟಪಸಂಸ್ಕಾರವನ್ನೂ, ಕಲಶಸ್ಥಾಪನೆಯೇ ಮೊದಲಾದ ಎಲ್ಲಾ ಕರ್ಮಗಳನ್ನೂ ಮಾಡಿದನು.

ಉಲ್ಲಿಖ್ಯಾಂಬುಜಮಷ್ಟಪರ್ಣಮಭಿತಃ ಕೃತ್ವಾ ಪುಟಾನ್ಯಂತರೇ
ಕುಂಭಂ ರಾಜತಮವ್ರಣಂ ಚ ಪರಿತಃ ಕುಂಭಾನ್ ಶರಾಣಾಂ ಶತಮ್ ।
ತಸ್ಮಿನ್ ಪಾವಕಭಾಸ್ಕರೈಂದವಕಲಾಃ ಸಂವಾಹ್ಯ ಸಂಪೂಜ್ಯ ಚ
ಪ್ರಾತರ್ನೇ ಮನುವಿನ್ಮಹೋನ್ನತಮನಾಃ ಕುಂಭಾಭಿಷೇಕಂ ತತಃ ॥ ೫ ॥

ಉತ್ಕೃಷ್ಟಮನಸ್ಸುಳ್ಳ ಮಂತ್ರಜ್ಞನು ಅಷ್ಟದಲಪದ್ಮವನ್ನು ರಚಿಸಿ, ಸುತ್ತಲೂ ವೃತ್ತಾಕಾರಮಂಡಲಗಳನ್ನು ಮಾಡಿ, ಮಧ್ಯದಲ್ಲಿ ರಂಧ್ರಾದಿಗಳಿಲ್ಲದ ಬೆಳ್ಳಿಯ ಕಲಶವನ್ನೂ ಸುತ್ತಲೂ ಐನೂರು ಕಲಶಗಳನ್ನೂ ಸ್ಥಾಪಿಸಿ, ಅದರಲ್ಲಿ ಅಗ್ನಿ–ಸೂರ್ಯ–ಇಂದು ಕಲೆಗಳನ್ನಾವಾಹಿಸಿ ಪೂಜಿಸಿ ಅನಂತರ ಕುಂಭಾಭಿಷೇಕವನ್ನು ಮಾಡಿದನು.

ರಾಕ್ಷೋಘ್ನಂ ವಾಸ್ತುಹೋಮಂ ಬಲಿಮಥ ವಿಧಿವದ್ಬ್ರಹ್ಮಕುಂಭಾಭಿಷೇಕಂ
ವೈಶಾಖೇ ವಾರ್ಷರಾಶೌ ದಿನಕರಸಹಿತೇ ದಿಙ್ಮಹೀಧ್ರಾಂಕಘಸ್ರೇ ।
ಪ್ರಾಯಶ್ಚಿತ್ತಾನಿ ಮಂತ್ರೀ ಜನಪದಜನತಾವೃದ್ಧಯೇ ಲೋಕಮಾತುಃ
ಕೇತೂದ್ಧಾರಂ ಚ ತುಷ್ಟ್ಯೈ ವ್ಯತನುತ ಪರಮಾನಂದಸಂದೋಹಮಾಲಿಃ ॥ ೬ ॥

ಪರಮಾನಂದಪೂರ್ಣನಾದ ಮಂತ್ರಜ್ಞನು ಊರಿನ ಜನರ ಅಭಿವೃದ್ಧಿಗಾಗಿ, ಜಗದಂಬೆಯ ಸಂತೋಷಕ್ಕಾಗಿ, ವೈಶಾಖಮಾಸದಲ್ಲಿ ವೃಷಭರಾಶಿಯಲ್ಲಿ ಸೂರ್ಯನಿರಲು, ಹದಿನೇಳನೆಯ ದಿವಸ ರಾಕ್ಷೋಘ್ನಹೋಮವನ್ನೂ, ವಾಸ್ತುಹೋಮವನ್ನೂ, ಬಲಿಯನ್ನೂ, ನಂತರ ವಿಧಿವತ್ತಾಗಿ ಬ್ರಹ್ಮಕುಂಭಾಭಿಷೇಕವನ್ನೂ, ಪ್ರಾಯಶ್ಚಿತ್ತಗಳನ್ನೂ, ಧ್ವಜಾರೋಹಣವನ್ನೂ ಮಾಡಿದನು.

ಪ್ರಾಙ್ಮಾಘಸ್ಯ ವಲಕ್ಷಪಕ್ಷನವಮೀಸಿದ್ಧೋದ್ಧವೋದ್ಯದ್ದ್ವಿಜೈಃ
ಪಂಚಾಹಂ ಪರಿವರ್ತಿತೋ ವಿಜಯತೇ ಬ್ರಹ್ಮೇವ ಪಂಚಾತ್ಮಕಮ್ ।
ಯಸ್ಮಿನ್ನಾದ್ಯದಿನಾಂತರಾತ್ರಿಸಮಯೇ ಭೇರೀನಿನಾದೈಃ ಸಮಂ
ಪ್ರಾರ್ಚ್ಯಾಂಬಾಪ್ರತಿಮಾಂ ಕರೋತಿ ಮನುವಿತ್ ಕೇತೋಃ ಸಮಾರೋಪಣಮ್ ॥ ೭ ॥

ಮಾಘಮಾಸದ ಶುಕ್ಲಪಕ್ಷದ ನವಮೀವರೆಗೆ ಐದು ದಿನಗಳ ಕಾಲ ಪಂಚಭೂತಾತ್ಮಕವಾದ ಶರೀರದಂತೆ ಬ್ರಾಹ್ಮಣರಿಂದ ನಡೆಸಲ್ಪಟ್ಟ ಉತ್ಸವವು ಸಂಪನ್ನವಾಯಿತು. ಈ ಉತ್ಸವದಲ್ಲಿ ಮೊದಲನೆಯ ದಿನದ ರಾತ್ರಿಸಮಯದಲ್ಲಿ ಮಂತ್ರಜ್ಞನು ಭೇರೀನಾದಗಳೊಂದಿಗೆ ಅಂಬಿಕೆಯ ಮೂರ್ತಿಯನ್ನು ಪೂಜಿಸಿ ಧ್ವಜಾರೋಹಣವನ್ನು ಮಾಡುತ್ತಾನೆ.

ಕಾಂತಾರೈಃ ಪೂಗಪೋತೈ ರುಚಿರಕದಲಿಕಾಮಂಜರೀಪುಂಜವಾರೈ–
ರ್ನ್ಯಗ್ರೋಧಾಶ್ವತ್ಥಚೂತಪ್ರಮುಖತರುಗತೈಃ ಪಲ್ಲವೈರ್ಭೂಷಯಿತ್ವಾ ।
ಭೂತೇಭ್ಯಃ ಪಾರ್ಷದೇಭ್ಯೋ ಬಲಿಮಪಿ ವಿಕಿರನ್ ದೇಶಿಕೋ ದೇವಭಕ್ತ್ಯಾ
ಪ್ರಾರೇಭೇಽಕ್ಲಿಷ್ಟಕರ್ಮಾ ಮನುಕುಲಜನುಷಾಂ ಪ್ರೀತಯೇ ಚೋತ್ಸವಾಯ ॥ ೮ ॥

ಕೆಂಪು ಕಬ್ಬುಗಳಿಂದಲೂ, ಅಡಿಕೆ ಸಸಿಗಳಿಂದಲೂ, ಸುಂದರ ಬಾಳೆಗೊನೆಗಳಿಂದಲೂ ಆಲ–ಅಶ್ವತ್ಥ–ಮಾವು ಮೊದಲಾದ ವೃಕ್ಷಗಳ ಪಲ್ಲವ (ಕೊಡಿ) ಗಳಿಂದಲೂ ಅಲಂಕರಿಸಿ, ಕುಂದಿಲ್ಲದೆ (ಲೋಪದೋಷಗಳಿಲ್ಲದೆ) ಕರ್ಮವನ್ನಾಚರಿಸುವ ಆಚಾರ್ಯನು ದೇವಭಕ್ತಿಯಿಂದ ಭೂತಗಳಿಗೂ, ಪರಿವಾರಗಣಗಳಿಗೂ ಬಲಿಯನ್ನು ನೀಡಿ ಮನುಕುಲದಲ್ಲಿ ಜನಿಸಿದವರ (ಮನುಷ್ಯರ) ಸಂತೋಷಕ್ಕಾಗಿ ಉತ್ಸವಕ್ಕೆ ತೊಡಗಿದನು.

ತತ್ತತ್ತಾಲೈರ್ಮೃದಂಗೈರ್ಧಿಮಿಕಿಟಧಿಕಿಟಾರಾವಮಿಶ್ರೈರನೂನೈ–
ರ್ಭೇರೀಭಾಂಕಾರನಾದೈರ್ದರವರನಿನದೈಃ ಕಾಹಲೀತೂರ್ಯಘೋಷೈಃ ।
ಕೇತೂಚ್ಚ್ರಾಯೈರ್ದ್ವಿಜಾನಾಂ ಶ್ರುತಿಪಠನರವೈಶ್ಚಾಪಿ ತೇ ಘೋಷಯಂತೋ
ಯಾತ್ರಾಂ ದೇವೀಂ ಸಮೂರ್ಧ್ನಾ ಕೃತಪಟುನಟನಾ ಭೂತಯೇ ಸಂವಹಂತಿ ॥ ೯ ॥

ಧಿಮಿಕಿಟ–ಧಿಮಿಕಿಟ ಧ್ವನಿಗಳಿಂದ ಕೂಡಿದ ತಾಳಗಳಿಂದಲೂ ಮೃದಂಗಗಳಿಂದಲೂ, ಮೊಳಗುತ್ತಲಿರುವ ಭೇರೀಭಾಂಕಾರ ಧ್ವನಿಗಳಿಂದಲೂ, ಶ್ರೇಷ್ಠಶಂಖಧ್ವನಿಗಳಿಂದಲೂ, ನಗಾರಿ–ವಾದ್ಯಘೋಷಗಳಿಂದಲೂ, ಪತಾಕೆಗಳ ಹಾರಿಸುವಿಕೆಯಿಂದಲೂ, ವಿಪ್ರರ ವೇದಪಠನಗಳಿಂದಲೂ ಘೋಷವನ್ನು ಮಾಡುತ್ತಾ, ದೇವಿಯ ಉತ್ಸವಬಿಂಬವನ್ನು ತಲೆಯಲ್ಲಿರಿಸಿ ನೃತ್ಯವನ್ನು ಮಾಡುತ್ತಾ ಮೆರವಣಿಗೆಗಾಗಿ ಕೊಂಡೊಯ್ಯುತ್ತಾರೆ.

ಏವಂ ಪಂಚಾಹಮೇತೇ ಪಶುಪತಿದಯಿತಾಪ್ರೀತಯೇ ವಾಹಯಂತೋ
ಯಾಪ್ಯೈರ್ಯಾನೈಶ್ಚ ದೇವ್ಯಾ ವಿದಧತಿ ವಿವಿಧಾಡಂಬರೈರ್ಭೂತಿಯಾತ್ರಾಮ್ ।
ಷಷ್ಠೇ ವಾರೇ ದಶಮ್ಯಾಂ ವಿಮಲಮವಭೃಥಸ್ನಾನಮಾಚಾರಯಂತ–
ಶ್ಚಕ್ರುರ್ದೇವ್ಯಾ ಸಮಂ ತೇ ಧೃತಧೃತಿವಿಮಲಾ ಮಜ್ಜನಂ ಪುಷ್ಕರಿಣ್ಯಾಮ್ ॥ ೧೦ ॥

ಹೀಗೆ ಇವರು ಐದು ದಿವಸಗಳ ಕಾಲ, ಪರಮೇಶ್ವರನ ಸತಿಯ ಪ್ರೀತಿಗಾಗಿ ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ವಿವಿಧ ವೈಭವಗಳಿಂದ ದೇವಿಯ ಮೆರವಣಿಗೆಯನ್ನು ಮಾಡುತ್ತಾರೆ. ಆರನೆಯ ದಿವಸ ದಶಮಿಯಂದು ಸರೋವರದಲ್ಲಿ ಪವಿತ್ರವಾದ ಅವಭೃಥಸ್ನಾನವನ್ನು ಮಾಡಿಸಿ, ದೇವಿಯೊಂದಿಗೆ ಅವರೂ ಸಹ ಪರಿಶುದ್ಧಬುದ್ಧಿಯುಳ್ಳವರಾಗಿ ಸ್ನಾನವನ್ನು ಮಾಡಿದರು.

ಆರ್ಯೇಽನಾರ್ಯೇ ಕದರ್ಯೇ ತವ ಶರಣಗತೇ ತ್ವತ್ಪದಾಂಭೋಜಲೀನೇ
ದೀನೇ ಕುರ್ಯಾಃ ಕೃಪಾಂ ತಾಂ ಮಯಿ ಪರಮಶಿವೇ! ಮಾ ಕೃಥಾ ಮಯ್ಯುಪೇಕ್ಷಾಮ್ ।
ಕಾ ವಾಽನ್ಯಾ ದೀನಬಂಧೋ! ಪರಿಸರತಿ ಸುತಂ ಯದ್ಯುಪೇಕ್ಷೇತ ಮಾತಾ
ಪುತ್ರೋ ವಾಽನ್ಯಾಂ ಶರಣ್ಯಾಂ ವ್ರಜತು ವದ ಶಿವೇ! ಮಾತರಂ ಕಾಂ ಭವತ್ಯಾಃ ॥ ೧೧ ॥

ಪೂಜ್ಯಳೇ! ದುರ್ನಡತೆಯುಳ್ಳ, ನಿಕೃಷ್ಟನಾದ, ನಿನ್ನನ್ನೇ ಶರಣುಹೊಂದಿದ, ನಿನ್ನ ಚರಣಕಮಲಗಳಲ್ಲಿ ಲೀನನಾದ, ದೀನನಾದ ನನ್ನಲ್ಲಿ ಕೃಪೆಯನ್ನು ತೋರು. ನನ್ನಲ್ಲಿ ಉಪೇಕ್ಷೆಯನ್ನು ಮಾಡಬೇಡ. ಹೇ ದೀನಬಾಂಧವಳೇ! ಒಂದುವೇಳೆ ತಾಯಿಯು ಮಗನನ್ನು ಉಪೇಕ್ಷಿಸಿದರೆ ಬೇರೆ ಏನು ಗತಿ! ಹೇ ಶಿವೆ! ಮಗನಾದರೋ ನಿನ್ನ ಹೊರತಾಗಿ ಯಾವ ತಾಯಿಯನ್ನು ತಾನೇ ರಕ್ಷಕಳನ್ನಾಗಿ ಆಶ್ರಯಿಸಲಿ.

ಕಾರಾಷ್ಟ್ರಾಣಾಂ ದ್ವಿಜಾನಾಂ ತ್ವಮಸಿ ಪರಶಿವೇ! ಪಾರಯಿತ್ರೀ ಸವಿತ್ರೀ
ತ್ವತ್ಪಾದಾಂಭೋಜಯುಗ್ಮಂ ತರಿರಿಹ ವಸತಾಂ ಸಂಸೃತೌ ದುಃಖಭಾಜಿ ।
ಇತ್ಯಾಸನ್ನೇ ಪ್ರಪನ್ನೇ ಮಯಿ ಪರಮಕೃಪಾಧೋರಣೇ! ತ್ವತ್ಸಮೀಕ್ಷಾ
ಭೂಯಾದ್ಭೂತೇಶಜಾಯೇ! ಹರ ಮಮ ದುರಿತಂ ದುರ್ಧರಂ ದುರ್ಮುಖಸ್ಯ ॥ ೧೨ ॥

ಪರಶಿವೆಯೇ! ಕರ್ಹಾಡ ಬ್ರಾಹ್ಮಣರನ್ನು ಪಾಲಿಸುವ ತಾಯಿಯು ನೀನೇ ಆಗಿರುವೆ, ದುಃಖಭರಿತವಾದ ಈ ಸಂಸಾರದಲ್ಲಿ ವಾಸಿಸುವವರಿಗೆ ನಿನ್ನ ಪಾದಕಮಲದ್ವಂದ್ವವೇ ನೌಕೆಯು ಎಂದು ಸಮೀಪಕ್ಕೆ ಬಂದಿರುವ ಶರಣಾಗತನಾದ ನನ್ನ ಮೇಲೆ, ಹೇ ಪರಮಕೃಪಾಳುವೇ! ನಿನ್ನ ಶುಭದೃಷ್ಟಿಯು ಉಂಟಾಗಲಿ. ಭೂತೇಶನಸತಿಯೇ! ಅಪ್ರಿಯವಚನವಾಡುವಂತಹ ನನ್ನ ಸಹಿಸಲಸಾಧ್ಯವಾದ ಕಷ್ಟವನ್ನು ನೀಗಿಸು.

ನೂನಂ ಕರ್ಮಪ್ರಸೂನಂ ಹಿಮಗಿರಿತನಯೇ! ನಿಃಸೃತಂ ತ್ವತ್ಪದಾಬ್ಜಾತ್
ಮದ್ಭಾಗ್ಯಾಯತ್ತಮಾರಾದನುಭವಿತುಮಹಂ ಕಾಲಮೇತಂ ಮಹಾಂತಮ್ ।
ಅಸ್ಮಿನ್ನೇವಾವಸಂ ದ್ರಾಗಗಲಪುರಮಹೇಶಾನಿ! ಸರ್ವಂ ತದಿತ್ಥಂ
ದೈವೇನಾದಕ್ಷಿಣೇನ ಪ್ರತಿಹತಮಧುನಾ ವಿಶ್ವಯೋನೇ! ಧಿಗಸ್ಮಾನ್ ॥ ೧೩ ॥

ಹಿಮಗಿರಿಸುತೆಯೇ! ನಿಶ್ಚಿತವಾಗಿಯೂ ನನ್ನ ಭಾಗ್ಯಕ್ಕಧೀನವಾದ, ನಿನ್ನ ಪಾದಕಮಲದಿಂದಲೇ ಉತ್ಪನ್ನವಾದ ಕರ್ಮಫಲವನ್ನು ನಿನ್ನ ಚರಣಗಳ ಸಮೀಪದಲ್ಲಿಯೇ ಅನುಭವಿಸಲು ನಾನು ಬಹಳಕಾಲದವರೆಗೆ ಈ ಸಂಸಾರದಲ್ಲೇ ಉಳಿದೆನು. ಹೇ ಅಗಲ್ಪಾಡಿಪುರದ ಮಹೇಶ್ವರಿಯೇ! ಈಗ ಆ ಎಲ್ಲಾ ಕರ್ಮಫಲವೂ ಪ್ರತಿಕೂಲಕರವಾದ ವಿಧಿಯಿಂದ ನಾಶಮಾಡಲ್ಪಟ್ಟಿತು, ಹೇ ವಿಶ್ವಜನನಿಯೇ! ನಮಗೆ ಧಿಕ್ಕಾರ.

ಪುತ್ರಾ ಮಿತ್ರಾಣಿ ಭಾರ್ಯಾ ಜನನಿರಪಿ ಪರೇ ಬಂಧುವರ್ಗಾಶ್ಚ ಸರ್ವೇ
ಕುರ್ವಂತ್ಯಸ್ಮಿನ್ ಪ್ರಮೋದಂ ಯದಿ ವಿಮಲತರಾಃ ಸಂಪದಃ ಸಂತ್ಯನಂತಾಃ ।
ನೋ ಚೇತ್ ಕಸ್ಯಾಪಿ ನಾಯಂ ವಿಲಸತಿ ಗಿರಿಜೇ! ಕೋಽಪಿ ಕರ್ಮಾನುಬಂಧಃ
ಸಂಸಾರಾಬ್ಧೌ ಪುಮಾಂಸಂ ವಲಯತಿ ಮಮ ತಂ ಕರ್ಮಬಂಧಂ ಲುನೀಹಿ ॥ ೧೪ ॥

ಒಂದು ವೇಳೆ ಪರಿಶುದ್ಧವಾದ (ನ್ಯಾಯದಿಂದ ಸಂಪಾದಿಸಿದ) ಬಹಳಷ್ಟು ಸಂಪತ್ತಿದ್ದರೆ ಮಕ್ಕಳು, ಮಿತ್ರರು, ಹೆಂಡತಿ, ತಾಯಿ, ಇತರಬಂಧುಗಳು ಎಲ್ಲರೂ ಸಹ ಈತನ ವಿಷಯದಲ್ಲಿ ಸಂತೋಷವನ್ನು ಹೊಂದುತ್ತಾರೆ. ಇಲ್ಲದಿದ್ದರೆ ಯಾರಿಗೂ ಈತನು ಇಷ್ಟವಾಗುವುದಿಲ್ಲ. ಪಾರ್ವತಿಯೇ! ಯಾವುದೋ ಕರ್ಮಾನುಬಂಧವು ಪುರುಷನನ್ನು ಸಂಸಾರಸಾಗರದಲ್ಲಿ ತೇಲಿಸುತ್ತದೆ. ಅಂತಹ ನನ್ನ ಕರ್ಮಬಂಧವನ್ನು ಕತ್ತರಿಸು.

ಧೀಹಂಸೀ ಮಾನಸೇಷ್ಟಾ ಸರಸಸರಸಿಜಕ್ರೀಡನೋತ್ಕಂಠಿತೇಯಂ
ಸಂಸಾರಾಸಾರಕಾಸಾರಜಕಲುಷಪೃಷತ್ಕಚ್ಚರಾ ಸಚ್ಚರಿತ್ರಾ ।
ತ್ವತ್ಪಾದಾಂಭೋಜಯುಗ್ಮಂ ತುಹಿನಗಿರಿಸುತೇ! ಭಕ್ತಿನಾಲಾವಲೀಢಂ
ನಿರ್ವಾಣಾಮೋದಮಾಕಾಂಕ್ಷತಿ ಪರಮದುರಾಸ್ವಾದಮಾನಂದಕಂದಮ್ ॥ ೧೫ ॥

ಮನಸ್ಸಿಗೆ ಇಷ್ಟವಾಗಿರುವ (ಮಾನಸಸರೋವರ ಪ್ರಿಯವಾಗಿರುವ), ಮಕರಂದದಿಂದ ಕೂಡಿದ ಕಮಲದ ಜೊತೆ ಆಟವಾಡಲು ಉತ್ಸುಕಳಾಗಿರುವ ಸನ್ನಡತೆಯುಳ್ಳ ಬುದ್ಧಿ ಎಂಬ ಹಂಸಿಯು ಸಂಸಾರವೆಂಬ ನಿಸ್ಸಾರವಾರ (ನೀರಿಲ್ಲದ) ಕೊಳದಲ್ಲಿ ಪಾಪವೆಂಬ ಕೆಸರಿನಿಂದ ಮಲಿನಳಾಗಿರಲು, ಹೇ ಹೈಮವತೀ ! ಭಕ್ತಿ ಎಂಬ ನಾಳದಿಂದ ಸಹಿತವಾದ ಮೋಕ್ಷವೆಂಬ ಸುಗಂಧವುಳ್ಳ, ಪರಮಸುಖವನ್ನು ನೀಡುವ, ಅತ್ಯಂತದುರ್ಲಭವಾದ ನಿನ್ನ ಪಾದಕಮಲಯುಗ್ಮವನ್ನು ಬಯಸುತ್ತಿರುವಳು.

ಕಲ್ಯಾಣಾನಾಂ ನಿಧಾನಂ ದುರಿತಕುಲಮಹಾರಣ್ಯಕಾಲಾಗ್ನಿಕೀಲಂ
ದಾರಿದ್ರ್ಯಾಂಭೋಧಿಶೋಷಂ ಕಿಸಲಯಸುಷಮಾಚೋರಮಾನಂದಪೂರಮ್ ।
ಸಂಸಾರಾಂಭೋಧಿಭೂಷಂ ವಿಬುಧಕುಲಹೃದಾಹ್ಲಾದಪೋಷಂ ಸತೋಷಂ
ಕೋ ವಾ ನೈವಾದ್ರಿಯೇತಾಖಿಲಜನಜನನಿ! ತ್ವತ್ಪದಾಂಭೋಜಯುಗ್ಮಮ್ ॥ ೧೬ ॥

ಸಕಲಜನರ ಮಾತೆಯೆ! ಮಂಗಳಗಳ ಗಣಿಯೂ, ಪಾಪಸಮೂಹವೆಂಬ ಮಹಾರಣ್ಯಕ್ಕೆ ಕಾಲಾಗ್ನಿಜ್ವಾಲೆಯಂತಿರುವ, ದಾರಿದ್ರ್ಯಸಾಗರವನ್ನು ಬತ್ತಿಸುವಂತಹ, ಚಿಗುರೆಲೆಯ ಕಾಂತಿಯನ್ನಪಹರಿಸುವ, ಆನಂದಪ್ರವಾಹವಾಗಿರುವ, ಸಂಸಾರಸಾಗರದ ಭೂಷಣವಾದ, ವಿದ್ವಜ್ಜನಹೃದಯಾನಂದವರ್ಧಕವಾದ, ನಿನ್ನ ಪಾದಪದ್ಮದ್ವಯವನ್ನು ಯಾರು ತಾನೇ ಸಂತೋಷದಿಂದ ಆದರಿಸಲಾರರು?

ವಕ್ಷೋಜೌ ತೇ ವಿಶಾಲೌ ನಯನಯುಗಮಿದಂ ಪ್ರಸ್ಫುರತ್ಪಂಕಜಾಭಂ
ಪಾಣಿದ್ವಂದ್ವಂ ಮೃದಿಷ್ಠಂ ಶಿವಸತಿ! ನಲಿಕಾಕಾರಮಾಜಾನುಲಂಬಿ ।
ವೇಣೀ ಕಾಲಾಹಿಕಾಂತಿರ್ಜನನಿ! ಕಟಿತಟಂ ಕೋಟರಗ್ರಂಥಿಲೀನಂ
ಕೋಟೀರಂ ಚಾಪಿ ಚಿತ್ತೇ ತುಹಿನಕರಕಲಾಪೀಡಮಾಭಾತು ನಿತ್ಯಮ್ ॥ ೧೭ ॥

ಎಲೈ ಶಿವಪತ್ನಿಯೇ! ವಿಶಾಲವಾದ ನಿನ್ನ ಸ್ತನದ್ವಯಗಳೂ, ಅರಳಿದ ತಾವರೆಯ ಕಾಂತಿಯುಳ್ಳ ಈ ನಿನ್ನೆರಡು ಕಣ್ಣುಗಳೂ, ಕೊಳವೆಯಾಕಾರದ ಮಂಡಿಯವರಗೆ ವ್ಯಾಪಿಸುವ ಕೋಮಲವಾದ ಎರಡು ಕೈಗಳೂ, ಕೃಷ್ಣಸರ್ಪದ ಕಾಂತಿಯುಳ್ಳ ಜಡೆಯೂ, ಒಡ್ಯಾಣಗ್ರಂಥಿಯಿಂದ ಕೂಡಿದ ನಡುವೂ, ತಾಯೇ! ಚಂದ್ರಕಲಾರೂಪವಾದ ಶಿರೋಭೂಷಣದಿಂದ ಕೂಡಿದ ನಿನ್ನ ಕಿರೀಟವೂ ಸದಾ ನನ್ನ ಮನಸ್ಸಿನಲ್ಲಿ ಸ್ಫುರಿಸಲಿ.

ಗಾತ್ರಂ ಗೋತ್ರೇಶಜಾತೇ! ಗಿರಿಶಭುಜಲತಾಗ್ರಂಥಿಗಾಢೋಪಗೂಢಂ
ಪಾತ್ರಂ ಮುಕ್ತಾವಲೀನಾಂ ನಿಲಯನಮಮಲಾಶೇಷಲಾವಣ್ಯಧಾಮ್ನಾಮ್ ।
ಸೌಭಾಗ್ಯಾನಾಂ ನಿಧಾನಂ ನಿಧಿರಿಹ ವಿದುಷಾಂ ಮಂಡನಂ ಮಂಡನಾನಾಂ
ಧಾತ್ರಂ ಸರ್ವಾಗಮಾನಾಂ ನಿವಸತು ಹೃದಯೇ ಮಾಮಕೇ ತಾವಕೀನಮ್ ॥ ೧೮ ॥

ಎಲೈ ಪರ್ವತರಾಜಪುತ್ರಿಯೇ! ಪರಮೇಶ್ವರನ ಭುಜವೆಂಬ ಲತಾಕುಂಜದಲ್ಲಿ ದೃಢವಾಗಿ ಸೇರಿಕೊಂಡಿರುವಂತಹ, ಮುತ್ತಿನ ಹಾರಗಳಿಂದ ಶೋಭಿಸುವ, ಸಕಲಸೌಂದರ್ಯ–ಕಾಂತಿಗಳ ಆವಾಸವಾದ, ಸೌಭಾಗ್ಯಗಳ ಮೂಲಕಾರಣವಾದ, ವಿದ್ವಾಂಸರ ಪಾಲಿಗೆ ನಿಧಿಯೇ ಆಗಿರುವ, ಆಭರಣಗಳಿಗೂ ಅಲಂಕಾರವಾದ, ಸಕಲಶ್ರುತಿ–ಸ್ಮೃತಿ–ಶಾಸ್ತ್ರಗಳಿಗೆ ಆಶ್ರಯವಾದ ನಿನ್ನ ಸ್ವರೂಪವು ನನ್ನ ಹೃದಯದಲ್ಲಿ ನೆಲೆಸಲಿ.

॥ ಇತ್ಯಗಲ್ಪಾಡಿಮಾಹಾತ್ಮ್ಯೇ ಪಂಚಮಃ ಸ್ತಬಕಃ ॥
ಇಲ್ಲಿಗೆ ಅಗಲ್ಪಾಡಿಮಹಾತ್ಮೆಯಲ್ಲಿ ಐದನೇ ಸ್ತಬಕವು ಮುಗಿಯಿತು.

॥ ಕವಿವಂಶವರ್ಣನಮ್ ॥

ಶ್ರೀಮಾನ್ ಕೌಶಿಕವಂಶಮಂಡನಮಣಿಃ ಶ್ರೀರಾಮಚಂದ್ರಾಭಿಧೋ
ವಿಪ್ರಃ ಸರ್ವಗುಣೋತ್ತರಃ ಸಮಭವತ್ ಖಂಡೇರಖಂಡಾಲಯಃ ।
ತಸ್ಯಾಽಸೀದ್ವಿಬುಧೋತ್ತಮಾಂಗಮಕುಟೋದ್ಘೃಷ್ಟಾಂಘ್ರಿಯುಗ್ಮಾಂಬುಜಃ
ಪುತ್ರಃ ಪಾರ್ವಣಚಂದ್ರಚಾರುವದನಃ ಶ್ರೀವೇಂಕಟೇಶಾಭಿಧಃ ॥ ೧ ॥

ಖಂಡೇರಿಪ್ರದೇಶದ ಮನೆಯಲ್ಲಿ ಕೌಶಿಕಗೋತ್ರಕ್ಕೆ ಆಭರಣಮಣಿಪ್ರಾಯರಾದ, ಸಕಲ ಗುಣಸಂಪನ್ನರಾದ ಶ್ರೀಮಾನ್ ರಾಮಚಂದ್ರನೆಂಬ ಹೆಸರಿನ ವಿಪ್ರರು ಜನಿಸಿದರು. ಅವರಿಗೆ ಪಂಡಿತರ ತಲೆಯಲ್ಲಿರುವ ಕಿರೀಟಗಳಿಂದ ತಿಕ್ಕಲ್ಪಟ್ಟ ಪಾದಪದ್ಮಯುಗಲಗಳುಳ್ಳ (ಪಂಡಿತರಿಂದ ನಮಸ್ಕರಿಸಲ್ಪಡುವ) ಹುಣ್ಣಿಮೆಯ ಚಂದ್ರನಂತೆ ಸುಂದರವಾದ ಮುಖವುಳ್ಳ ಶ್ರೀವೇಂಕಟೇಶನೆಂಬ ಹೆಸರಿನ ಮಗನಿದ್ದನು.

ಸೋಽಯಂ ಸಮಸ್ತವಿದುಷಾಂ ಪ್ರವರೋ ವರೇಣ್ಯಂ ನಾರಾಯಣಂ ಸುತಮವಾಪ ಪವಿತ್ರಕೀರ್ತಿಮ್ ।
ಸೋಽಪ್ಯಾತ್ಮಜಾನಜನಯದ್ವಿಬುಧಾಗ್ರಗಣ್ಯಾನಸ್ಮತ್ಪಿತಾಮಹವರಾನ್ ಕಿಲ ಸಪ್ತಸಂಖ್ಯಾನ್ ॥ ೨ ॥

ಸಮಸ್ತವಿದ್ವಾಂಸರಲ್ಲಿ ಶ್ರೇಷ್ಠನಾದ ಅವನು ಉತ್ಕೃಷ್ಟನಾದ, ಪರಿಶುದ್ಧಕೀರ್ತಿವಂತನಾದ, ನಾರಾಯಣನೆಂಬ ಮಗನನ್ನು ಪಡೆದನು. ನಾರಾಯಣನು ಪಂಡಿತಾಗ್ರಗಣ್ಯರಾದ ನನ್ನ ಪಿತಾಮಹರೇ ಮೊದಲಾದ ಏಳು ಮಂದಿ ಮಕ್ಕಳನ್ನು ಪಡೆದನು.

ತೇಷಾಂ ರಾಮಾಭಿಧಾನಸ್ಯ ವರೇಣ್ಯಸ್ಯ ಪಿತುಃ ಪಿತುಃ ।
ಚರಣಸ್ಮರಣಂ ನಿತ್ಯಂ ಕರಣೀಯಂ ಧೃತಾತ್ಮಭಿಃ ॥ ೩ ॥

ಅವರಲ್ಲಿ ನನ್ನ ತಂದೆಯ ತಂದೆಯಾದ ಪೂಜ್ಯರಾದ ರಾಮ ಎಂಬವರ ಪಾದಸ್ಮರಣೆಯು ಜಿತೇಂದ್ರಿಯರಿಂದ ಪ್ರತಿದಿನವೂ ಮಾಡಲ್ಪಡಬೇಕು.

ಸೀದನ್ನಪಿ ಪ್ರತಿದಿನಂ ಸ್ವಶಿಲೋಂಛವೃತ್ತ್ಯಾ ಸರ್ವಂ ಕುಟುಂಬಭರಣಂ ಕಿಲ ಕರ್ಮಯೋಗೀ ।
ವೈತಾನಿಕಂ ತದನು ಪೈತೃಕಮಪ್ಯಶೇಷಂ ಪುಷ್ಣನ್ ಪರೇಣ ಪರಮಾಪ ಸಮಾಧಿನಾಽಯಮ್ ॥ ೪ ॥

ತನ್ನ ಭಿಕ್ಷಾವೃತ್ತಿಯಿಂದ ಪ್ರತಿದಿನವೂ ಕಷ್ಟವನ್ನನುಭವಿಸುತ್ತಿದ್ದರೂ ಕರ್ಮಯೋಗಿಯಾದ ಅವರು ಇಡೀ ಕುಟುಂಬಪೋಷಣೆಯನ್ನೂ, ಅಗ್ನಿಹೋತ್ರವನ್ನೂ, ಸಕಲಪಿತೃಕರ್ಮಗಳನ್ನೂ ಮಾಡುತ್ತಾ ಯೋಗಶಕ್ತಿಯಿಂದ ಪರಮಾತ್ಮನನ್ನು ಹೊಂದಿದರು.

ಗೌರ್ಯಾಂ ಗುಣಾನುರಾಗಿಣ್ಯಾಂ ಪುತ್ರಾನ್ ಗುಣವತಃ ಸುಧೀಃ ।
ಅಜೀಜನತ್ ಪಂಚ ತೇಷಾಂ ಜ್ಯೇಷ್ಠಃ ಶ್ರೇಷ್ಠಃ ಪಿತಾ ಮಮ ॥ ೫ ॥

ವಿದ್ವಾಂಸರಾದ ಅವರು ಗುಣಶೀಲೆಯಾದ ಪತ್ನಿ ಗೌರಿಯಲ್ಲಿ ಗುಣವಂತರಾದ ಐವರು ಮಕ್ಕಳನ್ನು ಪಡೆದರು. ಅವರಲ್ಲಿ ಹಿರಿಯರೂ ಶ್ರೇಷ್ಠರೂ ಆಗಿದ್ದವರು ನನ್ನ ತಂದೆಯವರು.

ಗೋವಿಂದಶರ್ಮಣಾ ತೇನ ಗೋವಿಂದಪದಮೀಯುಷಾ ।
ಸೋಽಹಂ ಕೃತಾರ್ಥಃ ಸಾವಿತ್ರ್ಯಾಂ ಸವಿತ್ರ್ಯಾಮುದಪಾದಿಷಿ ॥ ೬ ॥

ವಿಷ್ಣುಸಾಯುಜ್ಯವನ್ನು ಪಡೆದ ಆ ಗೋವಿಂದಶರ್ಮರಿಂದ ತಾಯಿಯಾದ ಸಾವಿತ್ರಿಯಲ್ಲಿ ನಾನು ಜನ್ಮತಳೆದು ಕೃತಾರ್ಥನಾದೆನು.

ತೇನಾದ್ಯ ವೀಕ್ಷ್ಯ ಚರಿತಂ ಜಗದಂಬಿಕಾಯಾಃ ಪೂರ್ವೈಃ ಸಮುದ್ಧೃತಮಪಿ ಪ್ರಗತಂ ಪ್ರಯತ್ಯ ।
ಪರ್ಷತ್ಪ್ರಮಾಸಮುಪಜಾತಕುತೂಹಲೇನ ಪ್ರಾರಬ್ಧಮೇತದಖಿಲಂ ಗಿರಿಜಾ ಪ್ರಸೀದೇತ್ ॥ ೭ ।

ಅಂತಹ ನನ್ನಿಂದ ಇವತ್ತು, ಹಿಂದಿನವರಿಂದ ಉದ್ಧರಿಸಲ್ಪಟ್ಟರೂ ಸಹ ಜಗದಂಬಿಕೆಯ ಚರಿತ್ರೆಯನ್ನು ಲುಪ್ತವಾದದ್ದನ್ನಾಗಿ ಕಂಡು, ಸಭೆಯೊಂದರಲ್ಲಾದ ಜ್ಞಾನದಿಂದ ಕುತೂಹಲವುಳ್ಳವನಾಗಿ ಪ್ರಯತ್ನಪೂರ್ವಕವಾಗಿ ಈ ಎಲ್ಲವೂ ಆರಂಭಿಸಲ್ಪಟ್ಟಿತು. ಇದರಿಂದ ಆ ಪಾರ್ವತಿಯು ಪ್ರಸನ್ನಳಾಗಲಿ.

॥ ಇತಿ ಶಮ್ ॥

ಶ್ರೀ ದುರ್ಗಾ ಪರಮೇಶ್ವರೀ ಅಮ್ಮನವರು
ಅಗಲ್ಪಾಡಿ

ವಿಶೇಷ ಧನ್ಯವಾದಗಳು

* ಪುಸ್ತಕ ಮುದ್ರಣಕ್ಕೆ ಹೃದಯ ಪೂರ್ವಕ ಅನುಮತಿ ಕೊಟ್ಟ ಖಂಡೇರಿ ಕುಟುಂಬದ ಸದಸ್ಯರಿಗೆ
* ಕನ್ನಡಕ್ಕೆ ಭಾವಾನುವಾದ ಮಾಡಿ ಕೊಟ್ಟ ವಿದ್ವಾನ್ ಶ್ರೀ ಕೃಷ್ಣರಾಜ ಭಟ್ಟ, ಬೆಂಗ್ರೋಡಿ ಅವರಿಗೆ
* ಮುನ್ನುಡಿ ಬರೆದು ಕೊಟ್ಟ ಡಾ. ಮಹೇಶ ಭಟ್ಟ ಆರ್. ಹಾರ್ಯಾಡಿ ಅವರಿಗೆ
* ಕರಡು ತಿದ್ದುಪಡಿಗೆ ಸಹಕಾರ ಕೊಟ್ಟ ಶ್ರೀ ಶ್ರೀಕೃಷ್ಣ ಭಟ್ (ಮೋಹನ) ಬಟ್ಯಮೂಲೆ ಹಾಗೂ ಡಾ॥ ರಾಧಾಕೃಷ್ಣ ಬೆಂಗ್ರೋಡಿ ಅವರಿಗೆ
* ಮುಖಪುಟ ಮತ್ತು ಮುದ್ರಣ ವಿನ್ಯಾಸ ಮಾಡಿದ ಶ್ರೀ ಜಯಂತ ರಾವ್, ಬೆಂಗಳೂರು ಅವರಿಗೆ
* ಮುದ್ರಣಕ್ಕೆ ಧನ ಸಹಾಯ ಒದಗಿಸಿದ ಪದಮಾರು– ಕೋಳಿಕ್ಕಜೆ ಕುಟುಂಬದ ಸದಸ್ಯರಿಗೆ
* ಅಂದವಾಗಿ ಮುದ್ರಿಸಿ ಕೊಟ್ಟ ಶ್ರೀ ಯಂತ್ರೋದ್ಧಾರಕ ಪ್ರಿಂಟರ್ಸ್ ಬೆಂಗಳೂರು ಇವರಿಗೆ
* ಜೊತೆಗೆ ನಿಂತು ಸಹಕರಿಸಿ, ಪ್ರೋತ್ಸಾಹ ಕೊಟ್ಟ ಜನಸೇವಾ ಸಂಸ್ಥೆಯ ಪದಾಧಿಕಾರಿಗಳಿಗೆ

JANASEVA
CHARITABLE ASSOCIATION

ಶ್ರೀ ಅಗಲ್ಪಾಡಿ ಮಾಹಾತ್ಮ್ಯಮ್

ಪ್ರಕಾಶಕರು:
ಜನಸೇವಾ ಚಾರಿಟೇಬಲ್ ಅಸೋಸಿಯೇಷನ್ (ರಿ)
ಬೆಂಗಳೂರು–೫೬೦ ೦೨೪
ಮೊ: ೯೫೩೫೦ ೦೦೩೬೫

For more information visit:
www.janaseva.in

ಮುದ್ರಕರು :
ಶ್ರೀ ಯಂತ್ರೋದ್ಧಾರಕ ಪ್ರಿಂಟರ್ಸ್
ಬೆಂಗಳೂರು –೨೬
ಮೊ: ೯೪೪೮೭ ೯೫೧೨೧

ಮೊದಲನೇ ಮುದ್ರಣ ೨೦೨೫
ಒಟ್ಟು ಪ್ರತಿಗಳು ೨೦೦೦

ಪ್ರತಿ ಒಂದರ ಬೆಲೆ : ₹ 100/–